ಶ್ರೀ ರಾಮಚಂದ್ರ ಮಿಷನ್®
ಆಂತರಿಕ ಪ್ರಸಾರಕ್ಕಾಗಿ ಮಾತ್ರ

ECHOES
INDIA

ಮಾರ್ಚ್ 2013 ಸಂಪುಟ 6 ಸಂಚಿಕೆ 2

# ಗುರುಗಳ ಬಗ್ಗೆ ವರದಿ

## ಜನವರಿ 2013

ಗುರುಗಳು ಗಾಯತ್ರಿಯಲ್ಲಿ ಇದ್ದುಕೊಂಡು ತಮ್ಮ ಮಾಮೂಲು ದಿನಚರಿಯನ್ನು ಅನುಸರಿಸುತ್ತಿದ್ದಾರೆ. ಬಹುತೇಕ ಯಾವಾಗಲೂ ಅಲ್ಲಿ ಸಾಯಂಕಾಲದ ಸತ್ಸಂಗ ಇರುತ್ತಿದ್ದು ಕೆಲವೊಮ್ಮೆ ಗುರುಗಳು ಅದನ್ನು ನಡೆಸಿಕೊಡುತ್ತಾರಾದರೂ ಹಲವುಬಾರಿ ಯಾರಾದರೂ ಪ್ರಶಿಕ್ಷಕರು ಅದನ್ನು ನಡೆಸಿಕೊಡುತ್ತಾರೆ.

ಜನವರಿ 4ರಂದು ಗುರುಗಳು ಚಲನಚಿತ್ರವೊಂದನ್ನು ನೋಡುತ್ತಿದ್ದು, ಅದು ರಾತ್ರಿ 11.30ರ ವರೆಗೂ ಮುಂದುವರಿದಿತ್ತು ಮತ್ತು ಅವರಿಗೆ ಮಲಗುವ ಮನಸ್ಸು ಇರಲಿಲ್ಲ. ಅವರು ತಮ್ಮ ಮೊಮ್ಮಗಳು ಮಾಧುರಿಯು UK ಯನ್ನು ತಲುಪುವುದನ್ನು ಕಾಯುತ್ತಿದ್ದರು ಎಂಬುದು ಆಮೇಲೆ ಎಲ್ಲರಿಗೂ ಅರಿವಾಯಿತು. ರಾತ್ರಿ 12.30ಕ್ಕೆ ಆಕೆಯೊಡನೆ ಮಾತನಾಡಿದ ನಂತರ ಗುರುಗಳು ನಿದ್ರಿಸಿದರು.



ಗುರುಗಳು ಮತ್ತೆ ತಮ್ಮ ಇ–ಮೇಲ್‌ಗಳನ್ನು ನೋಡತೊಡಗಿದ್ದಾರೆ. ಅವರು ಬಹುತೇಕ ಎರಡುಗಂಟೆಗಳ ಕಾಲ ಅವುಗಳಲ್ಲಿ ಕೆಲಸಮಾಡುವ ದಿನಗಳೂ ಇವೆ. ಅವರು 'ಕಾಡಿನಲ್ಲಿ 60 ವರ್ಷಗಳು' ಎಂಬ ಮೂರು ಭಾಗಗಳಿರುವ, BBC ಸಾಕ್ಷ್ಯಚಿತ್ರವನ್ನು ನೋಡಿ ತುಂಬ ಆನಂದಿಸಿದರು. ಒಂದುದಿನ ಊಟದ ಸಮಯದಲ್ಲಿ ಗುರುಗಳು, ಸ್ತ್ರೀ ಮತ್ತು ಪುರುಷರು ಜೊತೆಯಾಗಿ ಇದ್ದು, ಮದುವೆಯಾಗದಿದ್ದರೂ ಮಕ್ಕಳನ್ನು ಪಡೆದು ಆಮೇಲೆ ವಿವಾಹಕ್ಕೆ ಬದ್ಧರಾಗಲು ಅಸಮರ್ಥರಾಗುವ ಅಂಶಗಳ ಬಗೆಗೆ ಮಾತನಾಡುತ್ತಿದ್ದರು. ಅವರು ಇದನ್ನು, ಒಬ್ಬನು ಕೊಳ್ಳುವ ಮೊದಲೇ ಹಣ್ಣನ್ನು ತಿನ್ನುವುದಕ್ಕೆ ಸಮೀಕರಿಸಿದರು. ಭಾರತದಲ್ಲೂ ಇದು ಈಗ ಹೇಗೆ ಸಾಮಾನ್ಯವಾಗುತ್ತಿದೆ ಎಂಬುದನ್ನು ಎತ್ತಿಹೇಳುತ್ತಿದ್ದರು.

ಜನವರಿ 9ರ ಬುಧವಾರದಂದು ಗುರುಗಳು ಆಶ್ರಮಕ್ಕೆ ಹೋಗಿ ಪೂರ್ವಾಹ್ನ 9.00 ಗಂಟೆಗೆ ಸತ್ಸಂಗ ನಡೆಸಿ, ವಿವಾಹಗಳನ್ನು ಮಾಡಿಸುವ ಯೋಜನೆಯನ್ನು ಹಾಕಿಕೊಂಡಿದ್ದರು. ಹಾಗಿದ್ದರೂ ಅವರು ಅಸ್ವಸ್ಥರಿದ್ದುದರಿಂದ ಸೋ. ಕಮಲೇಶ್ ಅವರು ಸತ್ಸಂಗವನ್ನು ನಡೆಸಿ, ವಿವಾಹಗಳನ್ನು ನೆರವೇರಿಸಿಕೊಟ್ಟರು.

ಗುರುಗಳು ದೂರದರ್ಶನ ಧಾರಾವಾಹಿ 'ಚಾಣಕ್ಯ' ವನ್ನು ನೋಡುತ್ತಿದ್ದಾರೆ ಮತ್ತು ತನಗೆ ಚಾಣಕ್ಯನ ಬಗೆಗೆ ಹೆಚ್ಚು ಗೊತ್ತಿದ್ದಿಲ್ಲ ಆದರೆ ಆತ ರಾಜಕಾರಣದಲ್ಲಿ ಎಷ್ಟೇ ಜಾಣನಾಗಿದ್ದರೂ ಆತನ ಹೆಚ್ಚಿನ ಪ್ರಯತ್ನಗಳೆಲ್ಲವೂ ಪ್ರತೀಕಾರದಿಂದಲೇ ಕೂಡಿರುವಂತೆ ಕಾಣುತ್ತಿದೆ ಎನ್ನುತ್ತಿದ್ದರು. ಪ್ರತೀಕಾರದ ಮನೋಭಾವ ಒಳ್ಳೆಯದಲ್ಲವೆಂದು ಗುರುಗಳು ಹೇಳಿದರು.

## ಜನವರಿ 14, 2013 – ಪೊಂಗಲ್

ಗುರುಗಳು ಸ್ವಲ್ಪ ಬೇಗನೇ ಸಿದ್ಧರಾಗಿ ಗಾಯತ್ರಿಯಲ್ಲಿ ಹೊರಗಡೆ ಕೂತಿದ್ದರು. ಅವರು ಮಂಜಿನಿಂದ ಕೂಡಿದ ಚಳಿಯ ವಾತಾವರಣವನ್ನು ಗಮನಿಸಿ ಚೆನ್ನೈಯಲ್ಲಿ ಚಳಿಗಾಲ ಕೊನೆಯಾಗುವ ಸಮಯವಿದು ಎಂದು ಹೇಳಿದರು. ಗುರುಗಳು ಆಶ್ರಮ ತಲುಪಿದ ನಂತರ ಹೊಸದಾದ ದೃಶ್ಯ– ಶ್ರವ್ಯ ಮತ್ತು ಮಾಹಿತಿ ತಂತ್ರಜ್ಞಾನ ಸೌಲಭ್ಯಗಳ ಕೊಠಡಿಗೆ ಅಚ್ಚರಿಯ ಭೇಟಿಯನ್ನಿತ್ತರು. ಅವರು ಒಂದು ಭಾಷಣದ ಧ್ವನಿಮುದ್ರಣ ಮಾಡಿದರು. ಅದನ್ನು ಸತ್ಸಂಗದ ತರುವಾಯ ಧ್ಯಾನಮಂದಿರದಲ್ಲಿ ಬಿತ್ತರಿಸಲಾಯಿತು.

ಗುರುಗಳು ಸುದೀರ್ಘವಾದ 1 ಗಂಟೆ 10 ನಿಮಿಷಗಳ ಸತ್ಸಂಗವನ್ನು ನಡೆಸಿಕೊಟ್ಟರು. ಅದೊಂದು ಸಂಪೂರ್ಣ ತಲ್ಲೀನಗೊಳಿಸುವ ಅವಧಿಯಾಗಿದ್ದು ತದನಂತರ ಗುರುಗಳು ಬೆಳಗುತ್ತಿರುವುದನ್ನು ಗಮನಿಸಬಹುದಾಗಿತ್ತು. ಆಮೇಲೆ ಗುರುಗಳು ಕಾಟೇಜ್ ಪುನರ್ನಿರ್ಮಾಣ ಪ್ರಯತ್ನಗಳನ್ನು ಪರಿಶೀಲಿಸಲು ನಡೆದರು. ಊಟವಾದ ನಂತರ ಗುರುಗಳು ಗಾಯತ್ರಿಗೆ ತೆರಳಿದರು.

ಇದು 'ಗಾಯತ್ರಿ'ಗೆ 50 ವರ್ಷಗಳಾದ ದಿನವೂ ಆಗಿದ್ದು, ಸಾಯಂಕಾಲ 'ಗಾಯತ್ರಿ'ಯಲ್ಲಿ ಗಣೇಶ್–ಕುಮರೇಶ್ ಅವರ ಸಂಗೀತ ಕಚೇರಿ ಇತ್ತು. ಗುರುಗಳು ಎಲ್ಲ ಕೀರ್ತನೆಗಳನ್ನೂ ಆಸ್ವಾದಿಸಿದರು ಮತ್ತು ತನಗೆ ಇದೊಂದು ಸ್ಮರಣೀಯ ಕಾರ್ಯಕ್ರಮವಾಗಿತ್ತು ಎಂದರು. ಒಬ್ಬ ಪರಿಪೂರ್ಣ ಅತಿಥೇಯನಾಗಿ ಅವರು ಎಲ್ಲ ಅತಿಥಿಗಳನ್ನೂ ಊಟ ಮಾಡುವಂತೆ ಕೇಳಿಕೊಂಡರು ಮತ್ತು ಎಲ್ಲರೂ ಮುಗಿಸುವ ತನಕ ಕಾದರು.










ಬಹುತೇಕ ಇಸ್ತಾಂಬುಲ್‌ನಲ್ಲಿ ಚಿತ್ರೀಕರಣಗೊಂಡ ಚಲನಚಿತ್ರವೊಂದನ್ನು ಗುರುಗಳು ನೋಡಿದರು. ಅವರು ಆ ನಗರದ ಮೇಲೆ ಕಾರ್ಯವೆಸಗುತ್ತಿರುವುದನ್ನು ಗ್ರಹಿಸಬಹುದಾಗಿತ್ತು. ಮರುದಿನ, ಇಸ್ತಾಂಬುಲ್‌ನಿಂದ ಕುಟುಂಬವೊಂದು ಬಂದು, ಟರ್ಕಿಯಲ್ಲಿ ಮಿಷನಿನ ಬೆಳವಣಿಗೆಯ ಬಗ್ಗೆ ಅವರೊಡನೆ ಮಾತನಾಡಿದರು. ಬಂದವರು ಛಾಯಾಚಿತ್ರಗಳನ್ನು ತಂದಿದ್ದು ಗುರುಗಳು ಅವನ್ನು ತಾನು ಹಿಂದಿನ ದಿನ ಚಲನಚಿತ್ರದಲ್ಲಿ ನೋಡಿದ್ದವುಗಳಿಗೆ ಸಂಬಂಧಿಸುತ್ತ ಅತ್ಯಾಸಕ್ತಿಯಿಂದ ನೋಡುತ್ತಿದ್ದರು.

ತಿರುಚ್ಚಿಗೆ ಹೋಗುವ ಕೆಲದಿನಗಳ ಮುನ್ನ, ಪ್ರಯಾಣಮಾಡುವ ಮೊದಲು ವಿಶ್ರಾಂತಿಪಡೆಯಲು ತನಗೆ ಸಾಧ್ಯವಾಗುವಂತೆ, ಗಾಯತ್ರಿಯಲ್ಲಿ ಯಾರೂ ಸಂದರ್ಶಕರು ಇರದಿರುವಂತೆ ಗುರುಗಳು ಕೇಳಿಕೊಂಡರು. 'ಗುರುಗಳನ್ನು ಭೇಟಿಮಾಡುವುದು' ಎಂಬ ಹೆಸರುಳ್ಳ ವಿಚಾರಸಂಕಿರಣದಲ್ಲಿ ಭಾಗವಹಿಸಲೆಂದು ಸುಮಾರು 200 ಅಭ್ಯಾಸಿಗಳು ಯುರೋಪಿನಿಂದ ಮಣಪಾಕ್ಕಂಗೆ ಬರುತ್ತಿದ್ದುದರಿಂದ ಅವರ ತಿರುಚ್ಚಿಯ ಭೇಟಿಯು ಮುಂದಕ್ಕೆ ಹೋಯಿತು. ಗುರುಗಳು ರವಿವಾರದಂದು ಸತ್ಸಂಗವನ್ನು ನಡೆಸಿಕೊಡಲೆಂದು, ಮತ್ತು ಪುನಃ ಸೋಮವಾರದಂದು ವಿಚಾರಸಂಕಿರಣವನ್ನು ಉದ್ಘಾಟಿಸಲೆಂದು ಆಶ್ರಮಕ್ಕೆ ಬಂದರು. ಮಂಗಳವಾರ ಬೆಳಗಿನ ವಿಮಾನದಲ್ಲಿ ಅವರು ತಿರುಚಿಗೆ ಹೊರಟರು.

### ತಿರುಚ್ಚಿಯಲ್ಲಿ

ಗುರುಗಳ ಭೇಟಿಯ ವಿಷಯವನ್ನು ಪ್ರಕಟಿಸುತ್ತಿದ್ದಂತೆ ಅತ್ಯಾನಂದದ ಲಹರಿಯೊಂದು ತಿರುಚ್ಚಿಯನ್ನು ಆವರಿಸಿತು. ತಿರುಚ್ಚಿ ಆಶ್ರಮದಲ್ಲಿ ಜನವರಿ 21ರಿಂದ 25ರ ವರೆಗೆ ಪ್ರಶಿಕ್ಷಕರ ವಿಚಾರಸಂಕಿರಣವೊಂದನ್ನು ಆಯೋಜಿಸಲಾಯಿತು. ಭಾರತ ಮತ್ತು ಹೊರದೇಶಗಳಿಂದ ಬಂದ 80 ಪ್ರಶಿಕ್ಷಕರನ್ನು ಅಚ್ಚುಕಟ್ಟಾದ ಆಶ್ರಮ ವಾತಾವರಣವು ಸ್ವಾಗತಿಸಿತು. ಗುರುಗಳು 22ರಂದು ತಿರುಚ್ಚಿಗೆ ತಲುಪಿದರು ಮತ್ತು 23ರಂದು ಸತ್ಸಂಗವನ್ನು ನಡೆಸಿಕೊಟ್ಟರು. ಅವರು ಪ್ರಶಿಕ್ಷಕರ ಕೆಲಸ ಮತ್ತು ಬೈಠಕ್ಕನ್ನು ಕೊಡುವುದು ಹೇಗೆ ಎಂಬುದರ ಬಗ್ಗೆ ಮಾತನಾಡಿದರು. 26ರಂದು ಸತ್ಸಂಗದ ತರುವಾಯ ಅವರು ಭ್ರಾತೃತ್ವ, ಸಾಮರಸ್ಯದಲ್ಲಿ ಬದುಕುವುದು ಮತ್ತು ಧ್ಯಾನಿಸುವ ಸಮಯದ ಅಗತ್ಯದ ಬಗ್ಗೆ ಮಾತನಾಡಿದರು.

ತಾರೀಕು 27ರಂದು, ಗುರುಗಳು ನಡೆಸಿಕೊಟ್ಟ ಸತ್ಸಂಗದಲ್ಲಿ ಸುಮಾರು 1500 ಮಂದಿ ಅಭ್ಯಾಸಿಗಳು ಹಾಜರಿದ್ದರು.



### ತಂಜಾವೂರಿನಲ್ಲಿ ಒಂದು ವಿಶೇಷದಿನ

ತಂಜಾವೂರು ಕೇಂದ್ರದಲ್ಲಿ ಅಭ್ಯಾಸಿಗಳು 38.87 ಎಕರೆ ಜಾಗವನ್ನು ಪಡೆದಿದ್ದು ಅದರಲ್ಲಿ 12.57 ಎಕರೆಯಷ್ಟು ಭೂಮಿ ಆಶ್ರಮಕ್ಕಾಗಿ ನೋಂದಾವಣೆಯಾಗಿದ್ದು ಉಳಿದ ಭಾಗ ಅಭ್ಯಾಸಿಗಳ ವಸತಿನಿವೇಶನಗಳಿಗಾಗಿ ಇದೆ. ಧ್ಯಾನಮಂದಿರದ ತಾತ್ಕಾಲಿಕ ರಚನೆ, ಗುರುಗಳ ಕುಟೀರ, ಪಾಕಶಾಲೆ, ಒಂದು ಸಣ್ಣ ವಸತಿ, ಸ್ನಾನಗೃಹಗಳು ಮತ್ತು ಶೌಚಾಲಯಗಳನ್ನು ರಚಿಸಲಾಗಿದೆ. ಗುರುಗಳು ಈ ಕೇಂದ್ರಕ್ಕೆ ಭೇಟಿಕೊಡಲು ಕೆಲಕಾಲ ಕಾತರರಾಗಿದ್ದರೂ ಅವರ ಅಸ್ವಾಸ್ಥ್ಯದ ಕಾರಣದಿಂದಾಗಿ ಅವರ ಪ್ರಯಾಣದ ಮೇಲೆ ನಿರ್ಬಂಧವಿದ್ದುದರಿಂದಾಗಿ ಅದು ಸಾಧ್ಯವಾಗಿರಲಿಲ್ಲ.

ಗುರುಗಳು ಜನವರಿ 30ರಂದು ಪೂರ್ವಾಹ್ನ ಸುಮಾರು 8.20 ಗಂಟೆಗೆ




ತಿರುಚ್ಚಿಯಿಂದ ಆಗಮಿಸಿದರು, ಅವರು ಪ್ರಫುಲ್ಲಿತರಾಗಿದ್ದರು. ತಂಜಾವೂರು ಆಶ್ರಮಕ್ಕೆ ಕಾಲಿಟ್ಟ ಕ್ಷಣದಿಂದ ಅವರು ತನ್ನ ಬಾಲ್ಯದ ಮತ್ತು ತನ್ನ ಪೂರ್ವಜರ ಕುಟುಂಬದಲ್ಲಿನ ಘಟನೆಗಳನ್ನು ನೆನಪಿಸಿಕೊಳ್ಳುತ್ತಿದ್ದರು. ಬೆಳಗಿನ ಉಪಾಹಾರದ ನಂತರ, ಅವರು ಧ್ಯಾನ ಮಂದಿರಕ್ಕೆ ಆಗಮಿಸಿ ಸುಮಾರು 50 ನಿಮಿಷಗಳ ಕಾಲ ಸತ್ಸಂಗವನ್ನು ನಡೆಸಿಕೊಟ್ಟರು. ಸೋ. ಲಿಂಗುಸಾಮಿ (ಖ್ಯಾತ ಚಲನಚಿತ್ರ ನಿರ್ದೇಶಕರು)ಯವರು ತಮಿಳಿನಲ್ಲಿ ಮಾತನಾಡಿ ಒತ್ತಡತುಂಬಿದ ಸಿನಿಮಾ ಉದ್ಯಮದ ಸ್ವಭಾವದೊಂದಿಗೆ ತನ್ನ ಜೀವನವನ್ನು ಸಮದೂಗಿಸಲು ಸಹಜಮಾರ್ಗವು ತನಗೆ ಹೇಗೆ ಸಹಾಯ ಮಾಡಿತ್ತೆಂಬುದನ್ನು ವಿವರಿಸಿದರು.

ಗುರುಗಳು ತಮಿಳಿನಲ್ಲಿ ಮಾತನಾಡಿ, ತನ್ನ ಅಸ್ವಸ್ಥತೆಯು ಪ್ರತಿದಿನ ಬಾಬೂಜಿ ಮಹಾರಾಜರಿಂದ ಸಂದೇಶ(ಬೆಳಕಿನ ಲೋಕದಿಂದ ಪಿಸುಮಾತುಗಳು)ಗಳನ್ನು ಪಡೆಯುವ ಭಾಗ್ಯವನ್ನು ನಮಗೆ ದಯಪಾಲಿಸಿತು ಮತ್ತು ಅದನ್ನೋದುವ ಪ್ರತಿಯೊಬ್ಬರಿಗೂ ಅದು ಲಾಭವನ್ನು ಕರುಣಿಸಿದೆ ಎಂದು ಹೇಳಿದರು.







ಗುರುಗಳು ತನ್ನ ಕುಟೀರದಿಂದ ಧ್ಯಾನಮಂದಿರಕ್ಕೆ ನಡೆದುಕೊಂಡು ಬರಲು ಮತ್ತು ಸತ್ಸಂಗ ಮತ್ತು ಭಾಷಣಗಳ ತರುವಾಯ ಕುಟೀರಕ್ಕೆ ನಡೆದುಕೊಂಡು ಹೋಗಲು ನಿರ್ಧರಿಸುವ ಮೂಲಕ ಆಶ್ಚರ್ಯಾತ್ಮಕ ಆನಂದವನ್ನು ನೀಡಿದರು. ವಿಶ್ರಾಂತಿಯನ್ನು ತೆಗೆದುಕೊಳ್ಳುವ ಬದಲು ಹೊರಗಡೆ ಕುಳಿತುಕೊಂಡು ಅವರು ಮತ್ತೂ ಒಂದೂವರೆ ಗಂಟೆಯಕಾಲ ಅಭ್ಯಾಸಿಗಳೊಂದಿಗೆ ಮಾತುಕತೆಯನ್ನಾಡಿದರು. ಮೊದಲಿನ ದಿನಗಳಂತೆ, ಅವರು ಪ್ರಶ್ನೆಗಳಿಗೆ ಉತ್ತರಿಸಿದರು. ಮತ್ತು ಒಬ್ಬ ಎಳೆಹುಡುಗಿಯ ಒಂದೆರಡು ಹಾಡುಗಳನ್ನು ಕೇಳಿದರು ಮತ್ತು ಕೆಲ ಅಭ್ಯಾಸಿಗಳಿಂದ ಉಡುಗೊರೆಗಳನ್ನು ಸ್ವೀಕರಿಸಿದರು. ಈ ಅವಧಿಯು ಎಷ್ಟು ದೀರ್ಘವಾಗಿತ್ತೆಂದರೆ ಕೊನೆಗೆ ವಿಶ್ರಾಂತಿ ತೆಗೆದುಕೊಳ್ಳಿರೆಂದು ಗುರುಗಳನ್ನು ಅಭ್ಯಾಸಿಗಳೇ ಕೇಳಿಕೊಳ್ಳಬೇಕಾಯಿತು!

ಅಲ್ಲಿ ತಂಗಿದ ಸಮಯದಲ್ಲಿ ಗುರುಗಳು ಭೂಮಿಯ ರೂಪುರೇಷೆಗಳನ್ನು ಪರಿಶೀಲಿಸಿ ಒಂದು ಸ್ಥಳವನ್ನು ಧ್ಯಾನಮಂದಿರಕ್ಕೆಂದು ಗುರ್ತಿಸಿದರು. ಊಟವಾದ ಮೇಲೆ ಮತ್ತು ಕೆಲ ಅಭ್ಯಾಸಿಗಳನ್ನು ಭೇಟಿಯಾದ ಬಳಿಕ ಅಪರಾಹ್ನ ಸುಮಾರು 2.30 ಗಂಟೆಗೆ ತಿರುಚ್ಚಿಗೆಂದು ಹೊರಡುವ ಮೊದಲು ಅವರು ಆಶ್ರಮದ ಸುತ್ತೆಲ್ಲ ಓಡಾಡಿದರು. ಗುರುಗಳ ಭೇಟಿಯ ನಂತರ ಸಂತೋಷದ ವಾತಾವರಣವೊಂದನ್ನು ಹೆಚ್ಚಿನ ಅಭ್ಯಾಸಿಗಳು ಅನುಭವಿಸಿದರು.

### ಫೆಬ್ರುವರಿ 2 ಶನಿವಾರ, 2013

ಲಾಲಾಜಿ ಮಹಾರಾಜರ ಜನ್ಮ ವರ್ಧಂತಿಯಂದು ಗುರುಗಳು ಸತ್ಸಂಗವನ್ನು ನಡೆಸಲೆಂದು ಆಶ್ರಮಕ್ಕೆ ಬಂದರು. ಮುಖ್ಯ ಪ್ರವೇಶದ್ವಾರದಿಂದ ಧ್ಯಾನಮಂದಿರದವರೆಗೂ ದಾರಿಯುದ್ದಕ್ಕೂ ಅವರು ಪ್ರತಿಯೊಬ್ಬರನ್ನೂ ಅಭಿವಾದಿಸಿದರು. ನಂತರ ಸತ್ಸಂಗವನ್ನು ನಡೆಸಿಕೊಟ್ಟರು, ಅದರಲ್ಲಿ ಸುಮಾರು 1000 ಮಂದಿ ಅಭ್ಯಾಸಿಗಳು ಉಪಸ್ಥಿತರಿದ್ದರು. ಗುರುಗಳು ಎರಡು ವಿವಾಹಗಳನ್ನು ನೆರವೇರಿಸಿಕೊಟ್ಟರು. ಆಮೇಲೆ ಹೊಸ ಪಿಸುನುಡಿಗಳ ಸಂದೇಶವೊಂದನ್ನು ಸೋ. ಪಿ. ಆರ್. ಕೃಷ್ಣ ಇಂಗ್ಲಿಷ್‌ನಲ್ಲಿ ಓದಿದರು ಮತ್ತು ಅದನ್ನೇ ರಷ್ಯನ್ ಮತ್ತು ಫ್ರೆಂಚ್ ಭಾಷೆಗಳಲ್ಲೂ ಓದಲಾಯಿತು. ಸಂದೇಶವು ಸ್ವೀಕರಿಸಲ್ಪಟ್ಟ ಭಾಷೆಯ ಬಗ್ಗೆ ಹೇಳುತ್ತ ಗುರುಗಳು, ಸ್ವೀಕೃತ ಸಂದೇಶವು ಹೃದಯದ ಭಾಷೆಯಲ್ಲಿ ಇರುವುದು, ಆ ಕಂಪನಕ್ಕೆ ಶ್ರುತಿಗೂಡಿಸಿರುವಷ್ಟು ಕಾಲ ಯಾರಾದರೂ ಸಂದೇಶವನ್ನು ಗ್ರಹಿಸಬಲ್ಲರು ಎಂದರು. ಆ ಸಂದೇಶವು ನಮ್ಮ ಗುರುಗಳ ಜನ್ಮದಿನಾಚರಣೆಗಳ ವಿಶೇಷ ಸಂದರ್ಭಗಳ ಪ್ರಾಮುಖ್ಯತೆಯನ್ನು ಮತ್ತು ಅಭ್ಯಾಸಿಗಳ ಮೇಲೆ ಅದರ ಪ್ರಭಾವವನ್ನು ಪ್ರತಿಪಾದಿಸಿದೆ.



ಗುರುಗಳು 'ಸತ್ಯೋದಯ'ದ ಪ್ರಥಮ ಶ್ರವ್ಯ ಸಿ.ಡಿಯನ್ನು ಬಿಡುಗಡೆ ಮಾಡಿದರು. ತದನಂತರ ಗುರುಗಳು ಜಾನಕಿ ಫಾರ್ಮ್‌ಗೆ ಮರಳಿದರು.

ತನ್ನ ಕುಟೀರಕ್ಕೆ ತಲುಪಿದನಂತರ, ಗುರುಗಳು ಆ ದಿನದ ಸತ್ಸಂಗದ ಬಗ್ಗೆ ಮಾತನಾಡುತ್ತ, 'ಇಂದಿನ ಬೈಠಕ್ ತುಂಬ ವಿಶೇಷವಾಗಿತ್ತು.' ಎಂದರು. ಅದನ್ನು ಹೇಳುವಾಗ ಗುರುಗಳಲ್ಲಿ ಹೊಳಪನ್ನು ಕಾಣಬಹುದಾಗಿತ್ತು.

ಸಾಯಂಕಾಲ ಸೋ. ಕಮಲೇಶ್ ಅವರು ವಿದೇಶೀ ಅಭ್ಯಾಸಿಗಳನ್ನೆಲ್ಲ ಸೋ. ಶಶಾಂಕ್ ಅವರ ವೇಣುವಾದನ ಕಚೇರಿ ಮತ್ತು ಜಾನಕಿ ಫಾರ್ಮ್‌ನಲ್ಲಿ ಭೋಜನಕ್ಕೆ ಆಮಂತ್ರಿಸಿದ್ದರು. ಸುಮಾರು 100ಕ್ಕಿಂತಲೂ ಹೆಚ್ಚು ಅಭ್ಯಾಸಿಗಳು ಅಲ್ಲಿ ಉಪಸ್ಥಿತರಿದ್ದರು. ಗುರುಗಳಿಗೆ ಸ್ವಲ್ಪ ಬಳಲಿಕೆಯಿದ್ದ ಕಾರಣ ಅವರು ತನ್ನ ಮಲಗುವ ಕೋಣೆಯಲ್ಲಿಯೇ ಉಳಿದು ಒಂದೂವರೆ ಗಂಟೆಯ ಚಿತ್ತಾಕರ್ಷಕ ಕಚೇರಿಯನ್ನು ಆಲಿಸಿದರು. ಕಚೇರಿಯ ನಂತರ ಗುರುಗಳು ಕಲಾವಿದರನ್ನು ಭೇಟಿಯಾಗಿ ಸ್ವಲ್ಪಹೊತ್ತು ಅವರೊಂದಿಗೆ ಮಾತನಾಡಿದರು.

ಫೆಬ್ರುವರಿ 3ರ ರವಿವಾರ, ಗುರುಗಳು ಒಂದು ಕಿರು ಅವಧಿಯ ಸತ್ಸಂಗವನ್ನು ನಡೆಸಿಕೊಟ್ಟರು ಮತ್ತು ಅವರು ಸ್ವಲ್ಪ ಬಳಲಿದ್ದ ಕಾರಣ ತನಗೆ ಭಾಷಣ ನೀಡಲು ಸಾಧ್ಯವಾಗದೆಂದು ಹೇಳಿದರು. ಆದರೆ ಮಣಪಾಕ್ಕಂನಿಂದ ಐರೋಪ್ಯ ಅಭ್ಯಾಸಿಗಳು ಕೇವಲ ಒಂದು ದಿನಕ್ಕೆಂದು ಬಂದಿದ್ದಾರೆಂದು ಗುರುಗಳೊಡನೆ ಹೇಳಿದಾಗ ಗುರುಗಳು ಅವರನ್ನೆಲ್ಲ ಜಾನಕಿ ಫಾರ್ಮ್‌ಗೆ ಊಟಕ್ಕೆ ಆಹ್ವಾನಿಸಿದರು ಮತ್ತು ಅನೇಕರ ಕಣ್ಣುಗಳು ತುಂಬಿಬಂದವು. ಗುರುಗಳು ಎಂದಿನಂತೆ ಜಾಗರೂಕ ಕಾಳಜಿಯುಳ್ಳವರಾಗಿದ್ದು ಅವರೆಲ್ಲ ಸರಿಯಾದ ಸಮಯಕ್ಕೆ ತೆರಳುವಂತೆ ನೋಡಿಕೊಂಡರು.

ಸಾಯಂಕಾಲವಾದಂತೆ ಗುರುಗಳ ಆರೋಗ್ಯ ಕಿಂಚಿತ್ ಇಳಿಮುಖವಾಗಿದ್ದು ಸ್ವಲ್ಪ ಚಿಕಿತ್ಸೆ ಇತ್ತು ಮತ್ತು ಗುರುಗಳು ಪುನಃ ನೋವು ಮತ್ತು ಸಂಕಟಗಳ ಬಗ್ಗೆ ಮಾತನಾಡುತ್ತ ಅವನ್ನು ಹೇಗೆ ಮುಗುಳ್ನಗುವಿನೊಂದಿಗೆ ಸ್ವೀಕರಿಸಬೇಕೆಂಬುದನ್ನು ಹೇಳುತ್ತಿದ್ದರು. ಅವರು ನೋವಿನಲ್ಲಿರುವುದು ಆದರೂ ಅವರು ಮುಗುಳ್ನಗುತ್ತಿರುವುದನ್ನು ಸ್ಪಷ್ಟವಾಗಿ ಕಾಣಬಹುದಾಗಿತ್ತು.

ವಾರಾಂತ್ಯದ ನಂತರ, ತಿರುಚ್ಚಿಯಲ್ಲಿ ಆಶ್ರಮವು ಖಾಲಿ ಎನಿಸುತ್ತಿತ್ತು. ಸುಮಾರು 40 ರಷ್ಯದ ಅಭ್ಯಾಸಿಗಳು ಬಂದಿದ್ದು ಗುರುಗಳು ಅವರನ್ನು ಕುಟೀರಕ್ಕೆ ಕರೆದು ಅವರಿಗೊಂದು ಬೈಠಕ್ ಕೊಟ್ಟು ಸ್ವಲ್ಪಕಾಲ ಅವರೊಂದಿಗೆ ಕಳೆದರು.

ಗುರುಗಳು ಅವರನ್ನು ತಮ್ಮ ಕುಟೀರಕ್ಕೆ ಕರೆದಿದ್ದರು, ಅವರಿಗೆ ಬೈಠಕ್ ನೀಡಿದರು ಮತ್ತು ಅವರೊಂದಿಗೆ ಸ್ವಲ್ಪ ಸಮಯ ಕಳೆದರು.



ಗುರುಗಳು ಬಿಸಿಲಿನಲ್ಲಿ ಸ್ವಲ್ಪ ಹೊತ್ತು ಕುಳಿತಿರುವಾಗ ಚೈನಾ ಮತ್ತು ಟರ್ಕಿಯಿಂದ ಬಂದಂತಹ ಅಭ್ಯಾಸಿಗಳ ಪೈಕಿ ಕೆಲವರು ಬಂದು ಅವರೊಂದಿಗೆ ಕುಳಿತರು. ಬಿಸಿಲು ಹೆಚ್ಚಾದಾಗ ಗುರುಗಳು ತಮ್ಮ ಪಡಸಾಲೆಯಲ್ಲಿನ ಉಯ್ಯಾಲೆಯಲ್ಲಿ ಕುಳಿತರು. ಬಹಳ ಹೊತ್ತಿನಿಂದ ಕುಳಿತಿದ್ದು, ಎಲ್ಲರೊಂದಿಗೆ ಮಾತನಾಡುತ್ತಿದ್ದರಿಂದ ಅವರು ಕೊಂಚ ಬಳಲಿದಂತೆ ಕಂಡರು. ವೈದ್ಯರು ಸಹ ಅವರನ್ನು ವಿಶ್ರಾಂತಿ ಪಡೆಯುವಂತೆ ವಿನಂತಿಸುತ್ತಿದ್ದರು. ನಂತರ ಅವರು ಬಾಬೂಜಿಯವರ ಬಗ್ಗೆ ಮಾತನಾಡುತ್ತಿರುವಾಗ ಇದ್ದಕ್ಕಿದ್ದಂತೆ ಅವರೊಳಗೆ ಶಕ್ತಿ ಪ್ರವಹಿಸುತ್ತಿದ್ದನ್ನು ಅಲ್ಲಿದ್ದವರು ಗಮನಿಸಬಹುದಾಗಿತ್ತು. ಗುರುಗಳು ಮಾತನಾಡುವುದು ಕೇಳುವಾಗ ಅವರ ಸುತ್ತ ಇದ್ದವರಿಗೆಲ್ಲ ಬಹಳ ವಿಶೇಷ ಸಮಯವಾಗಿದ್ದಿತು. ಗುರುಗಳು ಹೇಳಿದ ಕೆಲವು ಮಾತುಗಳನ್ನು ಇಲ್ಲಿಡಲಾಗಿದೆ. "ದೇವರು ನಮಗೆ ಉಡುಗೊರೆಗಳನ್ನು ಮತ್ತು ತೊಂದರೆಗಳನ್ನು ಜೊತೆಯಾಗಿ ಕೊಡುತ್ತಾನೆ. ಅಂತಹ ಉಡುಗೊರೆಗಳನ್ನು ಉಪಯೋಗಿಸಿಕೊಂಡು ನಮಗೆ ಬಂದಿರುವಂತಹ ತೊಂದರೆಗಳಿಂದ ಪಾರಾಗುವುದು ನಮ್ಮ ಕೆಲಸ." "ಪ್ರಗತಿ ಹೊಂದಿದ ಮನಸ್ಸಿನ ವಿಶೇಷ ಗುಣವೆಂದರೆ ಮುಂಚಿತವಾಗಿಯೇ ಏನನ್ನೂ ಯೋಚಿಸದಿರುವುದು. ಅದು ಖಚಿತವಾಗಿ ವರ್ತಮಾನದಲ್ಲಿ ಕೆಲಸ ಮಾಡುತ್ತದೆ." ವಿದ್ಯಾವಂತರಾದ, ಮೇಧಾವಿಗಳ ಮನಸ್ಸು ಮಾತ್ರ ಮುಂಚಿತವಾಗಿಯೇ ಆಲೋಚನೆ ಮಾಡುತ್ತದೆ, ಪೂರ್ವಸಿದ್ಧತೆಗಳನ್ನು ಮಾಡುತ್ತವೆ.

ಸಂಜೆಯ ಹೊತ್ತಿಗೆ ಗುರುಗಳು ಸುಸ್ತಾಗಿದ್ದರು ಮತ್ತು ಅವರು ಚಿಕಿತ್ಸೆಗಾಗಿ ಹೋಗಬೇಕಾಗಿತ್ತು. ರಾತ್ರಿಯ ಊಟದ ನಂತರ ಯುರೋಪಿನ ಕೆಲ ಅಭ್ಯಾಸಿಗಳು ಹೊರಡಬೇಕಾಗಿದ್ದ ಕಾರಣ, ಗುರುಗಳು ಅವರನ್ನು ಭೇಟಿಯಾಗಲು ಒಪ್ಪಿಕೊಂಡರು. ಅವರು ಒಳಗೆ ಬಂದರು ಮತ್ತು ಗುರುಗಳ ಉಪಸ್ಥಿತಿ ಮಾತ್ರದಿಂದಲೇ ಅವರ ಹೃದಯಸ್ಪರ್ಶಿಸಿದ್ದು ಅವರ ಕಣ್ಣುಗಳು ತುಂಬಿ ಹೋಗಿದ್ದವು. ಒಬ್ಬ ಹಿರಿಯಾಕೆಯು ಅವರ ಮೊಮ್ಮಗಳು ಗುರುಗಳಿಗೆ ಶುಭ ಕೋರಿರುವುದಾಗಿ ಹೇಳಿದರು ಮತ್ತು ಗುರುಗಳು ಆಕೆಯ ಮೊಮ್ಮಗಳಿಗೆ ಉಡುಗೊರೆಯನ್ನು ಕೊಟ್ಟರು. ಆ ಹೆಂಗಸಿಗೆ ಅಲ್ಲಿಯೆ ಮನಕರಗಿ ಹೋಗಿತ್ತು ಮತ್ತು ಕಣ್ತುಂಬಿಕೊಂಡೇ ಅಲ್ಲಿದ್ದ ಎಲ್ಲರೂ ಹೊರಟರು. ಈ ರೀತಿಯ ಪ್ರೀತಿ, ಸೌಮ್ಯತೆ, ಕರುಣೆಯಿಂದ ಕೂಡಿದ ಕಾರ್ಯಗಳನ್ನು ನಮ್ಮ ಗುರುಗಳಿಂದ ಅನುಕರಿಸಲು ನಾವು ಪ್ರಯತ್ನಿಸಬೇಕು.

ಗುರುಗಳ ಆರೋಗ್ಯವು ಮತ್ತೆ ಹಿನ್ನಡೆ ಕಂಡ ಕಾರಣ ಒಂದು ದಿನ ಮುಂಚಿತವಾಗಿಯೇ ಚೆನ್ನೈಗೆ ಹೊರಡಲು ನಿರ್ಧರಿಸಿದರು. ಮಂಗಳವಾರ ಬೆಳಗ್ಗೆ 11 ಗಂಟೆಯ ಹೊತ್ತಿಗೆ ತಿರುಚಿಯಿಂದ ಹೊರಟು ಮಾರ್ಗಮಧ್ಯದಲ್ಲಿ ಸಿಗುವಂತಹ ವಿಲ್ಲುಪುರಂನಲ್ಲಿ ತಂಗಿದರು.

ವಿಲ್ಲುಪುರಂನ ಅಭ್ಯಾಸಿಗಳಿಗೆ ಗುರುಗಳ ಬರುವಿಕೆಯನ್ನು ಮೊದಲೇ ತಿಳಿಸಿದ್ದು, ಅವರನ್ನು ಬರಮಾಡಿಕೊಳ್ಳಲು ಎಲ್ಲ ಸಿದ್ಧತೆಗಳು ನಡೆದಿದ್ದವು. ಗುರುಗಳು ಅಲ್ಲಿಗೆ ಮಧ್ಯಾಹ್ನ 12:30ರ ವೇಳೆಗೆ ಬಂದರು. ಅಲ್ಲಿ 30 ನಿಮಿಷಗಳ ಕಾಲ ಸತ್ಸಂಗವನ್ನು ನಡೆಸಿದರು ಮತ್ತು ಅಲ್ಲಿನ ಅಭ್ಯಾಸಿಗಳೊಂದಿಗೆ ಮಾತನಾಡಿದರು ಮತ್ತು ಮಧ್ಯಾಹ್ನದ ಭೋಜನ ಮುಗಿಸಿದರು. ಅವರು ಅಲ್ಲಿನ ಆಶ್ರಮಕ್ಕೆ "ತಪೋ ನಿಧಿ" ಎಂದು ಹೆಸರಿಟ್ಟರು. ಗುರುಗಳು ಅಲ್ಲಿಂದ ಸುಮಾರು 3ಗಂಟೆಯ ಹೊತ್ತಿಗೆ ಚೆನ್ನೈಗೆ ಹೊರಟು ಅಲ್ಲಿಂದ ನೇರ ಆರೋಗ್ಯ ತಪಾಸಣೆಗೆ ಹೋದರು ಮತ್ತು ಪ್ರಯಾಣದಿಂದ ಸುಸ್ತಾಗಿದ್ದ ಕಾರಣ ಅವರು ಅಲ್ಲಿಂದ ಕೂಡಲೆ ಹೊರಟುಬಿಟ್ಟರು.

ಗಾಯತ್ರಿಯಲ್ಲಿ ಒಂದು ಮಧ್ಯಾಹ್ನ, ಸಹಜಮಾರ್ಗದಲ್ಲಿ ದೀರ್ಘಕಾಲದಿಂದ ಇರುವಂತಹ ಯುರೋಪಿನ ಯುವ ಅಭ್ಯಾಸಿಗಳೊಂದಿಗೆ ಮಾತನಾಡುತ್ತಿದ್ದರು. ಅವರಿಗೆಲ್ಲ ಒಂದೊಂದು ಸೇಬನ್ನು ಕೊಟ್ಟು, ಹಿಂದೆ ಬಾಬೂಜಿಯವರು ಅವರಿಗೆ ಸ್ವಲ್ಪ ದಿನಗಳ ಕಾಲ ಉಪವಾಸವಿರಲು ಹೇಳಿ ನಂತರ ಒಂದು ಸೇಬನ್ನು ಕೊಟ್ಟಿದ್ದಾಗಿ ಹೇಳಿದರು. ಆ ಸಮಯದಲ್ಲಿ ಅವರು ಚಾಕುವಿಗಾಗಿ ಹುಡುಕುತ್ತಿದ್ದು, ಬಾಬೂಜಿಯವರು ಅದೇತಕ್ಕೆಂದು ಕೇಳಲು, ಇವರು ಎಲ್ಲರೊಂದಿಗೆ ಹಂಚಿಕೊಳ್ಳಲೆಂದು ಹೇಳಿದರು. ಇದಕ್ಕೆ ಬಾಬೂಜಿಯವರು "ಎಲ್ಲರಿಗೂ ಕೊಡಲು ನನಗೆ ತಿಳಿದಿದೆ. ನೀನು ತಿನ್ನಲೆಂದೇ ಇದನ್ನು ನಿನಗೆ ಕೊಡಲಾಗಿದೆ" ಎಂದು ಇವರಿಗೆ ಹೇಳಿದರು.. ಆದ್ದರಿಂದ ಗುರುಗಳು ಅಲ್ಲಿದ್ದವರಿಗೆಲ್ಲ ಇದು ಹಂಚಿಕೊಳ್ಳುವುದಕ್ಕಲ್ಲ, ನೀವೆ ತಿನ್ನಲಿಕ್ಕೆಂದು ಹೇಳಿದರು.

## ರಷ್ಯಾ ಹಾಗು ದಕ್ಷಿಣ ಅಮೆರಿಕಾದ ಅಭ್ಯಾಸಿಗಳಿಗಾಗಿ ನಡೆದ ವಿಚಾರಗೋಷ್ಠಿ

ರಷ್ಯನ್ ಭಾಷೆ ಮಾತನಾಡುವ ಅಭ್ಯಾಸಿಗಳು ಭಾರತಕ್ಕೆ ಬರುತ್ತಿರುವುದು ಸತತವಾಗಿ ಇದು ಮೂರನೇ ವರ್ಷ. ರಷ್ಯಾದಿಂದ 750 ಅಭ್ಯಾಸಿಗಳು ಮತ್ತು ದಕ್ಷಿಣ ಅಮೆರಿಕಾದಿಂದ 150 ಅಭ್ಯಾಸಿಗಳು ಮಣಪಾಕ್ಕಂನಲ್ಲಿ ಸೇರಿದರು. ಫೆಬ್ರವರಿ 9,



ಸೆಮಿನಾರ್‌ನ ಮೊದಲ ದಿನದಂದು ಗುರುಗಳು ಕುಟೀರದ ನವೀಕರಣದ ಕೆಲಸವನ್ನು ವೀಕ್ಷಿಸಲು ಹೋಗಿದ್ದರು ಮತ್ತು ಅಲ್ಲಿನ ಧೂಳಿನಿಂದ ಅವರಿಗೆ ತೊಂದರೆಯಾಯಿತು. ಅದಕ್ಕಾಗಿ ಅಭ್ಯಾಸಿಗಳನ್ನು ಧ್ಯಾನಮಂದಿರದಿಂದ ಡಾರ್ಮ್ 'ಎ'ಗೆ ಬರುವಂತೆ ಕೋರಿದರು ಮತ್ತು ಅಲ್ಲಿ ಒಂದು ಲಘು ಸತ್ಸಂಗವನ್ನು ನಡೆಸಿ, ನಂತರ ಗಾಯತ್ರಿಗೆ ಹೊರಟುಬಿಟ್ಟರು.

ಈ ಸೆಮಿನಾರ್‌ಗೆ ಕೊಟ್ಟಂತಹ ವಿಷಯ "ಪ್ರೇಮ ಮತ್ತು ಶರಣಾಗತಿ". ಎಲ್ಲರೂ ಒಟ್ಟಿಗೆ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರೂ ಸಹ, ಪ್ರತಿಯೊಬ್ಬರಲ್ಲಿಯೂ ಅವರವರ ವೈಯಕ್ತಿಕ ಮಟ್ಟದಲ್ಲಿ ಯಾವುದೇ ನಿರ್ಬಂಧವಿಲ್ಲದೆ ಶುದ್ಧೀಕರಣಗೊಳ್ಳುವ ಕ್ರಿಯೆ ಪ್ರಾರಂಭಗೊಂಡಿತ್ತು. ಗುರುಗಳ ಪ್ರೇಮ ಇಡೀ ಆಶ್ರಮಕ್ಕೆ ಆವರಣದಂತಿತ್ತು. ಅಭ್ಯಾಸಿಗಳಿಗೆ ಗುರುಗಳ ದೃಷ್ಟಿಯ ಬಗ್ಗೆ ಹಾಗು ನಮ್ಮ ಜೀವನವನ್ನು ಅವರ ದೃಷ್ಟಿಗೆ ಅನುಗುಣವಾಗಿ ಹೊಂದಿಸಿಕೊಳ್ಳುವುದು ಹೇಗೆಂಬುದರ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿ ಹೇಳಲಾಗಿತ್ತು.

ಅಲ್ಲಿ ಭಾಗವಹಿಸಿದ ಅಭ್ಯಾಸಿಗಳು ಸೋ. ಕಮಲೇಶ್ ಪಟೇಲ್, ಎ.ಪಿ. ದೊರೈ, ಸಿ. ರಾಜಗೋಪಾಲನ್, ಪಿ.ಆರ್. ಕೃಷ್ಣಾ, ಬಿಲ್ ವೇಕಾಟ್, ಸಮೀರ್ ಸಿಂಗ್ ಮತ್ತು ಎನ್.ಎಸ್. ನಾಗರಾಜ್ ರವರಿಂದ ಅನೇಕ ಸ್ವಾರಸ್ಯಕರ ಹಾಗು ಪ್ರಭಾವಿಗೊಳ್ಳುವ ಅನೇಕ ವಿಷಯಗಳನ್ನು ತಿಳಿದುಕೊಂಡರು. ಅವರ ಭಾಷಣಗಳು ಪ್ರೇಮ ಮತ್ತು ಶರಣಾಗತಿ, ದೈವೀ ಸಿದ್ಧಾಂತಗಳು, ಸೇವೆಯೆ ಜೀವನ, ಸಹಜ ಮಾರ್ಗದ ಚೇತನ ಮತ್ತು ನನ್ನ ಜೀವನದಲ್ಲಿ ಸಹಜಮಾರ್ಗ– ಈ ವಿಷಯಗಳ ಕುರಿತು ಇದ್ದವು. ಅಲ್ಲಿ ತಿಳಿದುಕೊಂಡಂತಹ ವಿಚಾರಗಳು ಎಲ್ಲರೊಂದಿಗೂ ವಿನಿಮಯವಾಗಲೆಂಬ

ಉದ್ದೇಶದಿಂದ ಉಪನ್ಯಾಸಕರು ಪ್ರತಿದಿನ ಮಧ್ಯಾಹ್ನ ಸಾಮೂಹಿಕ ಸಮಾವೇಶಗಳನ್ನು ನಡೆಸುತ್ತಿದ್ದರು.

ಎರಡು ವಿವಿಧ ಪ್ರಾಂತದವರು ಪಾಲ್ಗೊಂಡಿದ್ದರೂ ಸಹ ಬಹಳ ಬೇಗ ಅವರು ಹೊಂದಿಕೊಂಡರು ಮತ್ತು ಇದು ಕೆಲ ಮಿಶ್ರ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಎಡೆ ಮಾಡಿಕೊಟ್ಟಿತು. ಎರಡೂ ಖಂಡದ ಯುವಕರು ಒಂದು ಹಾಡಿನ ಧ್ವನಿಮುದ್ರಣ ಮಾಡಿ ಗುರುಗಳಿಗೆ ಸಮರ್ಪಿಸಿದರು.

ಕೊನೆಯ ದಿನದಂದು – ಫೆ.17ರಂದು, ಗುರುಗಳು ಸತ್ಸಂಗವನ್ನು ನಡೆಸಿದರು ಮತ್ತು ಅಲ್ಲಿ ಭಾಗವಹಿಸಿದಂಥ ಎಲ್ಲರನ್ನು ಊಟಕ್ಕೆ ಕರೆದರು. ಇದು ಅವರೆಲ್ಲರಿಗೂ ಗುರುಗಳಿಂದ ಸಿಕ್ಕಿದಂತಹ ಬಹು ವಿಶೇಷವಾದ ಬಹುಮಾನವಾಗಿತ್ತು. ಗುರುಗಳಿಗೆ ಒಂದು ಸಣ್ಣ ಸಾಂಸ್ಕೃತಿಕ ಕಾರ್ಯಕ್ರಮವನ್ನು ಪ್ರದರ್ಶಿಸಲಾಯಿತು. ಅದು ರಷ್ಯಾದ ಜಾನಪದ ನೃತ್ಯ ಮತ್ತು ಹಲವಾರು ಭಾಷೆಗಳ ಹಾಡಿನ ಮಿಶ್ರವಾಗಿತ್ತು.

ಗುರುಗಳು ವಿಶ್ವವು ಅಂತ್ಯವಿಲ್ಲದಂತಹ ಪ್ರಾರಂಭವೆಂದು ಹೇಳಿ ಮತ್ತೊಮ್ಮೆ ಅವರ ವಿವೇಕವನ್ನು ಹಂಚಿಕೊಂಡರು. ಸಹಜಮಾರ್ಗದಲ್ಲಿ ಅಂತಿಮ ಗುರಿಯನ್ನು ತಲುಪಿರುವಂತಹ ಅಭ್ಯಾಸಿಗಳು ಕೆಲವರು ಇದ್ದಾರೆಂದು ಬಾಬೂಜಿ ಮಹಾರಾಜರು ಅವರ "ದಿವ್ಯಲೋಕದ ಪಿಸುಮಾತುಗಳು" ನಲ್ಲಿ ಪ್ರಕಟವಾದಂತಹ ಇತ್ತೀಚಿನ ಸಂದೇಶವನ್ನು ಉಲ್ಲೇಖಿಸಿ ಅಲ್ಲಿದ್ದ ಎಲ್ಲರನ್ನು ಮತ್ತಷ್ಟು ಉತ್ತೇಜಿಸಿದರು. ಈ ಮಾತುಗಳು, ನಾವು ಪ್ರೇಮ ಮತ್ತು ಶರಣಾಗತಿಯೆಂಬ ಆಧ್ಯಾತ್ಮಿಕ ಗುಣಗಳನ್ನು ಬೆಳೆಸಿಕೊಳ್ಳುತ್ತ ನಮ್ಮೆಲ್ಲರಿಗೂ ಒಂದು ಅವಕಾಶ ಮತ್ತು ಅದನ್ನು ಸಾಧ್ಯವಾಗಿಸುವ ಮಾರ್ಗದರ್ಶಿಯು ನಮ್ಮೊಂದಿಗೆ ಇರುವುದಾಗಿ ಭರವಸೆ ಮೂಡಿಸಿದರು.

ಗುರುಗಳು ಪ್ರಶಿಕ್ಷಕರನ್ನು ಮಾಡುವ ಕೆಲಸದಲ್ಲಿ ನಿರತರಾಗಿದ್ದರು. ಈ ಸೆಮಿನಾರ್‌ನೊಂದಿಗೆ ವಿದ್ಯಾರ್ಥಿವೇತನ ತರಬೇತಿ ಕಾರ್ಯಕ್ರಮವೂ ನಡೆಯುತ್ತಿದ್ದು, ಇದರ ಪರಿಣಾಮವಾಗಿ ಗುರುಗಳು 2 ವಾರಗಳೊಳಗಾಗಿ 36 ಪ್ರಶಿಕ್ಷಕರನ್ನು ಮಾಡಬೇಕಾಯಿತು. ಅವರು ಒಂದು ದಿನಕ್ಕೆ ಮೂರು ಪ್ರಶಿಕ್ಷಕ ಬೈಠಕ್ ನೀಡುತ್ತಿದ್ದು, ಇದು ಅವರ ಶಕ್ತಿಯನ್ನು ಹೀರಿಬಿಡುತ್ತಿತ್ತು. ಇದರಿಂದ ಅವರ ದಿನಚರಿ ಬದಲಾಗಿ ಅವರು ಅನಿಶ್ಚಿತ ಸಮಯದಲ್ಲಿ ವಿರಮಿಸಬೇಕಾಗಿ ಬಂದು, ಇದು ಅವರ ರಾತ್ರಿಯ ನಿದ್ದೆಗೆ ತೊಂದರೆಯಾಗುತ್ತಿತ್ತು.

### ಶುಕ್ರವಾರ ಫೆಬ್ರವರಿ 15,2013. ಬಸಂತ ಪಂಚಮಿ

ಗುರುಗಳು ಸ್ವಲ್ಪ ಬಳಲಿದಂತೆ ಕಾಣುತ್ತಿದ್ದರು; ಸ್ವಲ್ಪ ಹೊತ್ತಿನ ನಂತರ ಸುಧಾರಿಸಿದಂತೆ ಕಂಡರು. ಅವರು ಆಶ್ರಮಕ್ಕೆ ಹೊರಟು ಅಲ್ಲಿ ಸತ್ಸಂಗವನ್ನು ನಡೆಸಿದರು. ಇದರ ನಡುವೆ ಆಶ್ರಮದಲ್ಲಿ ಜೋರಾಗಿ ಮಳೆ ಸುರಿಯಲಾರಂಭಿಸಿತು. ಅಲ್ಲಿದ್ದ ನಮ್ಮೆಲ್ಲರಿಗೂ ಈ ದಿನದ ಪ್ರಾಮುಖ್ಯತೆ ಮತ್ತು ಈ ಭೂಮಿಯ ಮೇಲೆ ಲಾಲಾಜಿ ಮಹಾರಾಜರು ಅವತರಿಸಿದ ಕಾರಣವನ್ನು ಗುರುಗಳು ತಿಳಿಸಿದರು. ಸತ್ಸಂಗ ಶುರುವಾದಾಗ ನಮಗೆ ಮಳೆಯಾಗುವುದೆಂದು ತಿಳಿದಿರಲಿಲ್ಲ. ಆದರೆ ಮಳೆ ಆಗಿದೆ. ಇಂತಹ ಪವಿತ್ರದಿನದಂದು ಮಳೆಯಾದರೆ ಅದು ಮಂಗಳಕರವೆಂದು ಗುರುಗಳು ಹೇಳಿದರು.


ಇದರ ನಂತರ ಗುರುಗಳು ಗಾರ್ಡನ್ ಆಫ್ ಹಾರ್ಟ್ಸ್‌ನಲ್ಲಿರುವ ಸೋ. ಸತ್‌ಬೀರ್‌ರವರ ಮನೆಯನ್ನು ಉದ್ಘಾಟಿಸಿದರು. ಅಲ್ಲಿ ಅವರಿಗಾಗಿ ಎಲ್ಲ ಸಿದ್ಧತೆಗಳಾಗಿದ್ದು, ಭಾನುವಾರದ ತನಕ ಗುರುಗಳು ಅಲ್ಲಿರುವುದಾಗಿ ನಿರ್ಧರಿಸಿದರು. ಬೈಠಕ್‌ಗಳನ್ನು ಕೊಡುವುದರಲ್ಲಿ ಗುರುಗಳು ನಿರತರಾಗಿದ್ದರು. ಅವರ ಗಂಟಲು ಕಟ್ಟಿದ್ದು ಅವರು ಶಾರೀರಿಕವಾಗಿ ತುಂಬ ಆಯಾಸಗೊಂಡಿದ್ದರು, ಆದರೆ ಅವರ ಕೆಲಸ ಎಂದಿಗೂ ನಿಲ್ಲುವುದಿಲ್ಲ. ಭಾನುವಾರದಂದು ಗುರುಗಳು ಸತ್ಸಂಗ ನಡೆಸಿದ್ದು, ಅದು 1ಗಂಟೆ 20 ನಿಮಿಷಗಳವರೆಗೆ ಸಾಗಿತ್ತು. ಇದಾದ ನಂತರ ಅವರು ನೆಲಮಾಳಿಗೆಯ ಹಜಾರಕ್ಕೆ ಹೋದರು ಮತ್ತು ಅಲ್ಲಿ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದಂತಹ ದಕ್ಷಿಣ ಅಮೆರಿಕಾದ ಅಭ್ಯಾಸಿಗಳೊಂದಿಗೆ ಬೆಳಗಿನ ಉಪಹಾರವನ್ನು ತೆಗೆದುಕೊಂಡರು. ಮತ್ತೆ ಅವರು ಸೋ. ಸತ್‌ಬೀರ್‌ರವರ ಮನೆಗೆ ಹೊರಟರು. ಅಲ್ಲಿ ಇನ್ನೂ ಬೈಠಕ್‌ಗಳು ನೀಡಬೇಕಾಗಿದ್ದು, ಅವರಿಗೆ ಸುಸ್ತಾಗಿದ್ದರೂ ಸಹ ಅವರ ಕೆಲಸವನ್ನು ಮುಗಿಸಿದರು. ಒಬ್ಬ ಅಭ್ಯಾಸಿಯು ಗುರುಗಳನ್ನು ಕುರಿತು ತಾವೇಕೆ ತಮ್ಮನ್ನು ಇಷ್ಟೊಂದು ವಿಸ್ತರಿಸಿಕೊಳ್ಳುತ್ತಿರುವರೆಂದು ಕೇಳಿದರು. ಇದಕ್ಕೆ ಗುರುಗಳು "ನನಗೆ ಹುಷಾರಿಲ್ಲದಿದ್ದಾಗ ಪರವಾಗಿರಲಿಲ್ಲ. ಆದರೆ ಈಗ ನಾನು ಚೆನ್ನಾಗಿದ್ದೇನೆ, ಈಗ




ನಾನು ಕೆಲಸ ಮಾಡಲೇಬೇಕು ಮತ್ತು ಪ್ರಶಿಕ್ಷಕ ಬೈಠಕ್ ನೀಡುವುದು ನನ್ನ ಕೆಲಸಗಳಲ್ಲೊಂದು" ಎಂದು ಹೇಳಿದರು. ಗುರುಗಳು ಅಲ್ಲಿ ಮಧ್ಯಾಹ್ನದ ಊಟ ಮುಗಿಸಿ ಗಾಯತ್ರಿಗೆ ತೆರಳಿದರು.

ಗುರುಗಳ ಕೆಲಸವು ಸಾಗುತ್ತಲೇ ಇರುತ್ತದೆ. ಅದಕ್ಕೆ ಕೊನೆಯಿಲ್ಲ. ಅವರ ಆರೋಗ್ಯ ಚೆನ್ನಾಗಿರಲೆಂದು, ಅವರು ಗಟ್ಟಿಮುಟ್ಟಾಗಿರಲೆಂದು ಮತ್ತು ಎಂದಿನಂತೆ ಅವರು ತೇಜೋಪೂರ್ಣವಾಗಿರಲೆಂದು ನಾವು ಪ್ರಾರ್ಥಿಸೋಣ.


## ಹೊಸ ಪ್ರಕಟನೆಗಳು




ಸಹಜಮಾರ್ಗ ಮಿಯಾಂಡರಿಂಗ್ಸ್
ಆಂಗ್ಲ




ಫೇಥ್
ಆಂಗ್ಲ



ರಿಲಿಜನ್ ಆಂಡ್ ಸ್ಪಿರಿಚುವಾಲಿಟಿ
ಆಂಗ್ಲ




ಹೃದಯವಾಣಿ 2006
ಹಿಂದಿ



ಲವ್ ಆಂಡ್ ಡೆತ್
ಆಂಗ್ಲ


ಡೌನ್ ಮೆಮೊರಿ ಲೇನ್
ಭಾಗ–1 ತಮಿಳು



ಸ್ಪೈಡರ್ಸ್ ವೆಬ್ ಭಾಗ–1
ಆಂಗ್ಲ



ಮೆಸೆಜಸ್ ಯುನಿವರ್ಸಲ್
ಭಾಗ–2 ಹಿಂದಿ



ರಿಯಾಲಿಟಿ ಅಟ್ ಡಾನ್
ಆಡಿಯೊ ಪುಸ್ತಕ–ಆಂಗ್ಲ

# ಪೂಜ್ಯ ಲಾಲಾಜಿ ಮಹಾರಾಜರ 140ನೇ ಜನ್ಮದಿನದ ವಾರ್ಷಿಕೋತ್ಸವ.

> "ಸಂತೋಷವು ಎಲ್ಲೋ ಹೊರಗಡೆ ಇರುವುದಿಲ್ಲ, ಇತರೆ ವಿಷಯಗಳಿಗಾಗಿ ಮನಸ್ಸನ್ನು ತೊರೆಯದೆ, ಹೊರಹಾಕದೆ ಇರುವಂತೆ ನಮ್ಮ ಮನಸ್ಸನ್ನು ಸ್ಥಿಮಿತದಲ್ಲಿಟ್ಟುಕೊಳ್ಳುವುದರಲ್ಲಿ ನಮ್ಮ ದೃಷ್ಟಿ ನೆಡುವುದರಲ್ಲಿರುತ್ತದೆ, ಈ ರಹಸ್ಯವನ್ನು ಯಾರು ತಿಳಿದಿರುತ್ತಾರೊ ಅವರು ಹೊರಗಡೆ ಆನಂದಕ್ಕಾಗಿ ಹುಡುಕಾಡುವುದಿಲ್ಲ"
>
> – ಪೂಜ್ಯ ಲಾಲಾಜಿ ಮಹಾರಾಜರು.

## ಉತ್ತರ

ಗುರ್‌ಗಾಂವ್ ಹಾಗು ಉತ್ತರ ಪ್ರದೇಶದಲ್ಲಿನ ಕೇಂದ್ರಗಳಾದ ಅಲಹಾಬಾದ್, ಬಲಿಯಾ, ಕಾನ್‌ಪುರ, ಲಾಲ್‌ಗಂಜ್, ಲಖನೌ, ಗೋಲಾ, ಗೋಕರ್ಣನಾಥ್ ಮುಂತಾದವುಗಳಲ್ಲಿ ಜನ್ಮದಿನೋತ್ಸವದ ಆಚರಣೆಯನ್ನು ಅಮಿತ ಉತ್ಸಾಹ ಹಾಗು ಸಂಭ್ರಮದಿಂದ ಆಯೋಜಿಸಿದ್ದರು. ವಲಯ–10ಕ್ಕೆ ಸೇರುವ ಚಂಡಿಗಡ, ಸೊನೆಪತ್, ಪಟಿಯಾಲ ಮತ್ತು ಭವಾನಿ ಕೇಂದ್ರಗಳಲ್ಲಿ ಕೂಡ ಕಾರ್ಯಕ್ರಮಗಳನ್ನು ಆಯೋಜಿಸಿದ್ದು ಅನೇಕ ಅಭ್ಯಾಸಿಗಳು ಎಲ್ಲಾ 3 ದಿನಗಳೂ ಭಾಗವಹಿಸಿದರು.

## ಪೂರ್ವ

ಕೊಲ್ಕತ, ಸಿಲಿಗುರಿ ಮತ್ತು ಖರಗ್‌ಪುರದಲ್ಲಿ ಆಚರಣೆಯನ್ನು ಆಯೋಜಿಸಿದ್ದು, ನೆರೆಹೊರೆಯ ಕೇಂದ್ರದವರಿಗೂ ಅನುಕೂಲಗಳನ್ನು ಮಾಡಲಾಗಿತ್ತು. ಈ ಕಾರ್ಯಕ್ರಮಗಳು ಭಾಷಣಗಳನ್ನು ಹಾಗು ಸಾಂಸ್ಕೃತಿಕ ಕಾರ್ಯಕ್ರಮಗಳನ್ನೊಳಗೊಂಡಿದ್ದವು ಮತ್ತು ಅಭ್ಯಾಸಿಗಳಿಗೆ ಆತ್ಮಪರಿಶೀಲನೆಯ ಸಮಯವನ್ನು ಸಹ ಒದಗಿಸಿಕೊಟ್ಟಿತ್ತು. ಸಹಜಮಾರ್ಗವನ್ನು ಇನ್ನೂ ಆಳವಾಗಿ ಅರ್ಥಮಾಡಿಕೊಳ್ಳುವ ಸುಸಂದರ್ಭವಿದಾಗಿತ್ತು.

## ದಕ್ಷಿಣ

ಆಂಧ್ರಪ್ರದೇಶದ ಕರ್ನೂಲು ಹಾಗು ವಿಜಯವಾಡದ ಕೇಂದ್ರಗಳಲ್ಲಿ 3 ದಿನದ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಅಲ್ಲಿ, ಸಾಮೂಹಿಕ ಚರ್ಚೆಗಳು, ಅವುಗಳು ನಿರೂಪಣೆ, ಪ್ರಶ್ನೆಗಳು ಮತ್ತು ಅಲ್ಲಿ ಭಾಗವಹಿಸಿದವರ ಆಧ್ಯಾತ್ಮಿಕ ಉನ್ನತಿಗಾಗಿ ಕೆಲ ಚಿತ್ರ ಪ್ರದರ್ಶನವೂ ಏರ್ಪಡಿಸಲಾಗಿತ್ತು. ಬೆಂಗಳೂರು, ಕೋಲಾರ, ಮಂಗಳೂರು, ಚನ್ನಪಟ್ಟಣ, ಗುಲ್ಬರ್ಗ, ಹುಬ್ಬಳ್ಳಿ, ಬೀದರ್, ರಾಯಚೂರು ಕೇಂದ್ರಗಳಲ್ಲಿ ಆಚರಣೆಯನ್ನು ಆಯೋಜಿಸಿದ್ದು, ಸುತ್ತಮುತ್ತಲಿನ ಅಭ್ಯಾಸಿಗಳು ಜೊತೆ ಸೇರಿದರು. ಉಪನ್ಯಾಸಗಳು, ಗುಂಪು ಚರ್ಚೆಗಳೇ ಅಲ್ಲದೆ, ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದವರಿಗೆ ಪ್ರಮಾಣಪತ್ರಗಳನ್ನು ಸಹ ವಿತರಿಸಲಾಯಿತು. ಕೇರಳದಲ್ಲಿನ ತ್ರಿವೇಂದ್ರಮ್, ಅಲುವಾ, ಪಯ್ಯನೂರ್ ಕೇಂದ್ರಗಳಲ್ಲಿ ಕೂಡ ಆಚರಿಸಲಾಯಿತು. ತಮಿಳುನಾಡಿನ ಮದುರೈನಲ್ಲಿ 200 ಅಭ್ಯಾಸಿಗಳು ಪಾಲ್ಗೊಂಡಿದ್ದರು.

## ಪಶ್ಚಿಮ

ದೇಶದ ಪಶ್ಚಿಮ ಭಾಗಗಳಾದ ಗುಜರಾತಿನ ಅಹ್ಮದಾಬಾದ್, ನಾಗ್‌ಪುರ್, ಸೊಲಾಪುರ ಮತ್ತು ಮಹಾರಾಷ್ಟ್ರದ ಮುಂಬೈ, ರಾಜಸ್ಥಾನದ ಅಲ್ವಾರ್ ಮತ್ತು ಜೋಧ್‌ಪುರದಲ್ಲಿಯೂ ಸಹ ಬಹು ಸಂಭ್ರಮದಿಂದ ಆಚರಿಸಲಾಯಿತು.


ಅಲುವ


ಬಿಕನೇರ್


ಮಂಗಳೂರು


ಗುಲ್ಬರ್ಗಾ


ಹುಬ್ಬಳ್ಳಿ


ಭಿಲ್ವಾರ


ಅಹಮದಾಬಾದ್


ಚನ್ನಪಟ್ಟಣ


ಮುಂಬೈ


ಮಿರ್ಜಾಪೂರ್


ಕಾನ್ಪುರ್


ನಾಗ್‌ಪುರ್


ವಿಜಯವಾಡ


ಅಲಹಾಬಾದ್


ಫುಲ್‌ಗಾಂವ್



ಕರ್ನೂಲು


ವಾರಣಾಸಿ


ಲಖನೌ


ಕೊಲ್ಕಾತಾ


ಬೆಂಗಳೂರು

# ವಿಚಾರಸಂಕಿರಣಗಳು

## ವಲಯ ಸಭೆ–ಕೊಲ್ಕಾತಾ



ಜನವರಿ 6 ಮತ್ತು 7ರಂದು ಪಶ್ಚಿಮಬಂಗಾಳದ ಅನೇಕ ಕೇಂದ್ರಗಳಿಂದ ಸುಮಾರು ಎಪ್ಪತ್ತು ಅಭ್ಯಾಸಿಗಳು ಆಶ್ರಮದಲ್ಲಿ ಸೇರಿದ್ದರು. ಈ ವಲಯದಲ್ಲಿ ಕೊಲ್ಕಾತಾ ಹಾಗು ಸಿಲಿಗುರಿಯಲ್ಲಿ ಮಾತ್ರ ಎರಡೇ ಆಶ್ರಮಗಳಿರುವುದರಿಂದ ಅತಿಥಿ ಅಭ್ಯಾಸಿಗಳಿಗೆ ಅಧ್ಯಾತ್ಮಿಕ ವಾತಾವರಣವನ್ನು ಅನುಭವಿಸಲು ಇಂತಹ ಸಭೆಗಳು ಸದವಕಾಶ ದೊರಕಿಸುತ್ತವೆ. ಗ್ಯಾಂಗ್ಟಕ್‌ನಲ್ಲಿ ಮೂರನೇ ಅಶ್ರಮದ ನಿರ್ಮಾಣವು ಪೂರ್ಣವಾಗಲಿದೆ.

ಸತ್ಸಂಗದ ನಂತರ ಸೋ. ಮಹೇಶ್ ಭರದ್ವಾಜ್ ಹಾಗು ಸೋ. ಜೇಸಲ್ ಮೆಹ್ತಾರವರು ಸಹಜಮಾರ್ಗದ ಮೂಲತತ್ವಗಳ ಬಗ್ಗೆ ಪ್ರಸ್ತುತಿಗಳನ್ನು ನೀಡಿದರು. ನಂತರ, 'ಧ್ಯಾನ' ಹಾಗು 'ಶುದ್ಧೀಕರಣ'ಗಳ ಕುರಿತು ಸೋ.ಶರದ್ ಝಾವರ್ ಹಾಗು ಸೋ. ಲೀನಾ ದವೇರವರು ಮಾತನಾಡಿದರು. ಭೋಜನಾನಂತರದ ಕಾಲದಲ್ಲಿ, 'ಪ್ರಾರ್ಥನೆ'ಯ ಬಗ್ಗೆ ದುರ್ಗಾಪುರದ ಸೋ. ಪರಿಮಲ್ ಜನಾರವರು ಹಾಗು ಖರಗ್‌ಪುರದ ಸೋ. ಚಂದ್ರಕಾಂತಾ ಅರೋರಾರವರು 'ದಿನಚರಿ ಬರವಣಿಗೆ' ಕುರಿತ ಆಸಕ್ತಿಕರ ಉಪನ್ಯಾಸಗಳನ್ನು ನೀಡಿದರು.

ಕೊಲ್ಕಾತಾದ ನೂರಕ್ಕೂ ಮಿಗಿಲಾದ ಅಭ್ಯಾಸಿಗಳು ರಾತ್ರಿ ಅಶ್ರಮದಲ್ಲಿಯೇ ಉಳಿದುಕೊಂಡರು. ಮರುದಿನ ಮುಂಜಾನೆಯ ಸತ್ಸಂಗದ ನಂತರ, ವಲಯಸಂಚಾಲಕರಾದ ಸೋ.ಅಜಯ್ ಭಟ್ಟರ್‌ರವರು ಗುರಿಯ ಬಗ್ಗೆ ಗಂಭೀರತೆ ಇದ್ದು, ಪ್ರಯತ್ನ ಕೈಬಿಡಬಾರದೆಂಬುದನ್ನು ಒತ್ತಿ ಹೇಳಿದರು. ಎರಡು ದಿನಗಳ ಈ ವಿಚಾರಸಂಕಿರಣದಲ್ಲಿನ ತಮ್ಮ ಅನುಭವಗಳನ್ನು ತಿಳಿಸುವಂತೆ ಅಭ್ಯಾಸಿಗಳನ್ನು ಕೇಳಲಾಯಿತು. ಸಮಸ್ತರೂ ಸುಮಧುರ ನೆನಪುಗಳು ಹಾಗು ಗುರುಗಳ ಮೇಲಿನ ಪ್ರೇಮದಿಂದ ಒಂದುಗೂಡಿದ ಹೃದಯಗಳೊಂದಿಗೆ ಮರಳಿದರು.





## ಪ್ರಕಟನಾ ಕಾರ್ಯಾಗಾರ, ಹುಬ್ಬಳ್ಳಿ

ಹುಬ್ಬಳ್ಳಿಯಲ್ಲಿ ಜನವರಿ 19 ಮತ್ತು 20ರಂದು, ಬೆಂಗಳೂರಿನ ಸೋ. ವೆಂಕಟ್‌ರಾವ್ ಹಾಗು ಅವರ ತಂಡವು ಹುಬ್ಬಳ್ಳಿ, ಶಿರಸಿ, ಗದಗ್, ನವನಗರ, ಕರೂರು, ರಾಣಿಬೆನ್ನೂರು, ಧಾರವಾಡ, ದಾವಣಗೆರೆ ಮತ್ತು ಬೆಳಗಾಂವ್‌ನಿಂದ ಬಂದ ಸುಮಾರು ನಲವತ್ತೈದು ಭಾಗಿಗಳಿಗಾಗಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು. 19ರಂದು ಸೋ.ವೆಂಕಟ್‌ರವರು 'ಸೇವೆ' ಬಗ್ಗೆ ಮಾತನಾಡಿದರು. ಈ ವಿಷಯದ ಮೇಲೆ ಗುರುಗಳು ನೀಡಿದ ಉಪನ್ಯಾಸಗಳ ದೃಶ್ಯ ತುಣುಕುಗಳನ್ನು ಪ್ರದರ್ಶಿಸಲಾಯಿತು. ಭಾಗಿಗಳನ್ನು ತಂಡಗಳನ್ನಾಗಿ ವಿಂಗಡಿಸಿ, ವಿವಿಧ ವಿಷಯಗಳನ್ನು ಆಧರಿಸಿ ಲಘು ನಾಟಕಗಳನ್ನು ಆಡಿಸಲಾಯಿತು. ಮಾರಾಟ ಪ್ರಕ್ರಿಯೆಯನ್ನು ವಿವರಿಸಲಾಯಿತು. ಎರಡನೆಯ ದಿನದಂದು, ಸಹಜಮಾರ್ಗ ಸಾಹಿತ್ಯವಾಚನದ ಪ್ರಾಮುಖ್ಯತೆಯನ್ನು ಬಿಂಬಿಸಲಾಯಿತು. ಬೆಳಿಗ್ಗೆ 6 ಘಂಟೆಗೆ ಸ್ವಯಂಸೇವಕರಿಗೆ ಪುಸ್ತಕಮಳಿಗೆಯನ್ನು ತೆರೆಯಲು ಹೇಳಲಾಯಿತು. ಸ್ಥಾಪನೆ ಹಾಗು ಮಾರಾಟದ ವೇಳೆ ಸ್ವಯಂಸೇವಕರಲ್ಲಿ ಉತ್ಸಾಹ ತುಳುಕುತ್ತಿತ್ತು. ಅಂದಿನ ಮಾರಾಟವು 48,000 ಆಗಿದ್ದುದು ಆಶ್ಚರ್ಯಜನಕ. ಕಾರ್ಯಾಗಾರವು 5ಘಂಟೆಯ ಸತ್ಸಂಗ ಹಾಗು ಅಭಿಪ್ರಾಯಪ್ರಸ್ತುತಿಯೊಡನೆ ಮುಕ್ತಾಯವಾಯಿತು.

## ಅಭೇದಾನ್‌ಪುರ, ಉತ್ತರಪ್ರದೇಶ

ಫೆಬ್ರುವರಿ 17ರಂದು ಅಭೇದಾನ್‌ಪುರದ ಶಾಲಾಕಟ್ಟಡವೊಂದರಲ್ಲಿ, ನಿರ್ವಹಣಾ ಮಂಡಳಿ, ಪ್ರಾಚಾರ್ಯರು, ಅಧ್ಯಾಪಕರು, ವಿದ್ಯಾರ್ಥಿಗಳು ಹಾಗು ಸ್ಥಳೀಯ ಅಭ್ಯಾಸಿಗಳೂ ಸೇರಿ ದಂತೆ ಸುಮಾರು 150 ಭಾಗಿಗಳಿಗಾಗಿ ಸಭೆಯನ್ನು ನಡೆಸಲಾಯಿತು. ಸೋ. ಸುಭಾಷ್‌ಚಂದ್ರರವರು ಕಾರ್ಯಕ್ರಮವನ್ನು ಆಯೋಜಿಸಿದ್ದರು.

ಸೋ. ಆರ್.ಎಸ್.ಇಂದೋಲಿಯಾರವರು ಸಹಜಮಾರ್ಗದ ಪರಿಚಯ ಮಾಡಿಕೊಟ್ಟು, ಮಾನವ ವಿಕಾಸದಲ್ಲಿ ಧ್ಯಾನದ ಪಾತ್ರವನ್ನು ತಿಳಿಸಿದರು. ಸೋ. ಜಿ.ಎಸ್.ಗಿಲ್‌ರವರು ಅಧುನಿಕ ಬದುಕಿನಲ್ಲಿ ಸಹಜಮಾರ್ಗವನ್ನು ಕುರಿತು ಮಾತನಾಡಿದರು. ಪ್ರಶ್ನೆಯೊಂದರ ಉತ್ತರವಾಗಿ, ಧ್ಯಾನದಿಂದ ಏಕಾಗ್ರತೆ ಬರುತ್ತದೆಯೇ ವಿನಾ ಕೇವಲ ಏಕಾಗ್ರತೆಯನ್ನು ಸಾಧಿಸುವುದು ಮಾತ್ರ ಧ್ಯಾನದ ಉದ್ದೇಶವಲ್ಲ ಎಂದು ಅವರು ಹೇಳಿದರು.

ಸೋ. ಉಷಾ ಗಿಲ್‌ರವರು ಧರ್ಮ ಮತ್ತು ಆಧ್ಯಾತ್ಮವನ್ನು ಕುರಿತು ಮಾತನಾಡಿದ ನಂತರ ಪ್ರಶ್ನೋತ್ತರ ಕಾರ್ಯಕ್ರಮವಿತ್ತು. ಪ್ರೇಕ್ಷಕರು ಸಹಜಮಾರ್ಗ ತತ್ವಗಳ ಪುಸ್ತಕಗಳನ್ನು ಖರೀದಿಸಿದರು ಹಾಗು ಸಭೆಯ ಕೊನೆಯಲ್ಲಿ ಭೋಜನವನ್ನು ಆಸ್ವಾದಿಸಿದರು.

# ಪ್ರಬಂಧ ಸ್ಪರ್ಧೆಯ ಪ್ರಮಾಣಪತ್ರ ವಿತರಣೆ

ಭಾರತದಾದ್ಯಂತ ವಿವಿಧ ಕೇಂದ್ರಗಳಲ್ಲಿ ನಡೆಸಿದ ಅಖಿಲ ಭಾರತ ಪ್ರಬಂಧ ಸ್ಪರ್ಧೆ–2012 ರ ವಿಜೇತರಿಗೆ ಪ್ರಶಸ್ತಿಪತ್ರ ವಿತರಣೆಯನ್ನು ತಿರುಪ್ಪೂರಿನ ಚೆಟ್ಟಿಪಾಳ್ಯಂ ಆಶ್ರಮದಲ್ಲಿ ಫೆಬ್ರವರಿ 3ರಂದು ಹಮ್ಮಿಕೊಳ್ಳಲಾಗಿತ್ತು. ಸೋ. ಎನ್.ಪ್ರಕಾಶ್, ವಲಯಸಂಚಾಲಕರಾದ ಸೋ. ಟಿ.ವಿ. ವಿಶ್ವನಾಥ ರಾವ್ ಹಾಗು ಕೇಂದ್ರಸಂಚಾಲಕರಾದ ಸೋ. ಎಸ್.ರವಿ ಸುಬ್ಬಿಯನ್‌ರವರು ಪ್ರಶಸ್ತಿ ವಿತರಣೆ ಮಾಡಿದರು. ಇದೇ ಸಮಾರಂಭವನ್ನು ಫೆಬ್ರವರಿ 3ರಂದು ಗುಲ್ಬರ್ಗಾದಲ್ಲಿ ಹಾಗು ಫೆಬ್ರವರಿ 10ರಂದು ಹುಬ್ಬಳ್ಳಿಯಲ್ಲಿ ಆಯೋಜಿಸಲಾಗಿತ್ತು. ಧಾರವಾಡ ಜಿಲ್ಲಾ ಶಿಕ್ಷಣಾಧಿಕಾರಿಗಳಾದ ಶ್ರೀ ವರ್ಧನ್‌ರವರು ಹುಬ್ಬಳ್ಳಿಯಲ್ಲಿ ಮುಖ್ಯ ಅತಿಥಿಗಳಾಗಿದ್ದರು. ಬಳ್ಳಾರಿಯಲ್ಲಿ ಎಎಸ್‌ಎಂ ಮಹಿಳಾಕಾಲೇಜಿನ ಪ್ರಾಚಾರ್ಯರಾದ ಡಾ. ಕೆ.ತೇಜಸ್ ಮೂರ್ತಿಯವರು ಮುಖ್ಯ ಅತಿಥಿಗಳಾಗಿದ್ದರು. ಬೀದರ್ ಹಾಗು ರಾಯಚೂರಿನಲ್ಲಿ ಫೆಬ್ರವರಿ 3ರಂದು ಕಾರ್ಯಕ್ರಮವನ್ನು ನಡೆಸಲಾಯಿತು. ದಕ್ಷಿಣ ವಲಯಕ್ಕಾಗಿ ಬೆಂಗಳೂರನ್ನು ಆಯ್ದುಕೊಂಡಿದ್ದು, ಸೋ. ಸೀತಾ ಕುಂಚಿತಪಾದಂರವರು ಫೆಬ್ರವರಿ 10ರಂದು ನಡೆದ ಕಾರ್ಯಕ್ರಮದ ಶೋಭೆ ಹೆಚ್ಚಿಸಿದರು.




ತಮಿಳುನಾಡು ಉತ್ತರ ವಲಯದ ಕಾರ್ಯಕ್ರಮವನ್ನು ತಿರುಚ್ಚಿಯಲ್ಲಿ ಆಯೋಜಿಸಲಾಯಿತು. ಆತ್ಮ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕರು ಹಾಗು ಅಧ್ಯಕ್ಷರಾದ ಡಾ.ಕೆ ರಾಮಕೃಷ್ಣನ್‌ರವರು ಮುಖ್ಯ ಅತಿಥಿಗಳಾಗಿದ್ದರು. ಮೊರಾದಾಬಾದ್‌ನಲ್ಲಿ ಕಾರ್ಯಕ್ರಮವನ್ನು ಫೆಬ್ರವರಿ 17ರಂದು ಆಯೋಜಿಸಲಾಗಿತ್ತು.

ಫೆಬ್ರವರಿ 10ರಂದು ಕಾರ್ಯಕ್ರಮವನ್ನು ಪನ್ವೇಲ್‌ನ ಆಶ್ರಮದಲ್ಲಿ ಮುಂಬೈ ಹಾಗು ನಾಸಿಕ್ ಕೇಂದ್ರಗಳಿಗಾಗಿ ಹಮ್ಮಿಕೊಳ್ಳಲಾಗಿತ್ತು. ಭಾರತ ಸರ್ಕಾರದ ವಿದೇಶಾಂಗ ಉದ್ದಿಮೆಯ ಸಾರ್ವತ್ರಿಕ ನಿರ್ದೇಶಕರಾದ ಡಾ.ಕವಿತಾ ಗುಪ್ತಾ(ಐಎಎಸ್)ರವರು ಸಭಾಪತಿಗಳಾಗಿದ್ದರು. ಸೋ. ಅನುರಾಧಾ ಹಾಗು ಸೋ. ಸಂಜಯ್ ಭಾಟಿಯಾರವರು ಗೌರವ ಅತಿಥಿಗಳಾಗಿದ್ದರು.

ಮುಂಬೈ ಮತ್ತು ಕೊಲ್ಕಾತಾ ಉಚ್ಚನ್ಯಾಯಾಲಯಗಳ ನಿ.ಮುಖ್ಯ ನ್ಯಾಯಾಧಿಪತಿಗಳಾದ ಚಿತ್ತತೋಷ್ ಮುಖರ್ಜಿಯವರು ಕೊಲ್ಕಾತಾ ಬಾ.ಮೆ.ಆಶ್ರಮದಲ್ಲಿ ವಿಜೇತರಿಗೆ ಪ್ರಶಸ್ತಿಗಳನ್ನು ಹಂಚಿದರು. ಸೋ. ಅಜಯ್ ಭಟ್ಟರ್‌ರವರು ಈ ಕಾರ್ಯಕ್ರಮದಿಂದ ಉದ್ಭವಿಸಿದ ಆಲೋಚನೆಗಳನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯವನ್ನು ಹೇಳುತ್ತಾ, ಹಾಗಾದರೂ ಕಾರ್ಯಕ್ರಮವು ಅರ್ಥಪೂರ್ಣವಾಗುತ್ತದೆ ಎಂದರು.

ಸಿಲಿಗುರಿ, ದಾರ್ಜಿಲಿಂಗ್ ಹಾಗು ಗ್ಯಾಂಗ್ಟಕ್‌ನಿಂದ ಆಹ್ವಾನಿತರು ಜನವರಿ 27ರಂದು ಸಿಲಿಗುರಿಯಲ್ಲಿ ಸೇರಿದರು. ಜ್ಞಾನಜ್ಯೋತಿ ಕಾಲೇಜಿನ ಪ್ರಾಂಶುಪಾಲರು ಹಾಗು ಯುನೆಸ್ಕೊದ ಸಲಹಾಕಾರರಾದ ಪ್ರೊ. ಜಯರಾಮನ್ ಸುರೇಶ್‌ರವರು ಗೌರವಾನ್ವಿತ ಅತಿಥಿಯಾಗಿದ್ದರು.









## ಕರ್ನೂಲ್ ಆಶ್ರಮಕ್ಕಾಗಿ ನಿವೇಶನದ ನೋಂದಣಿ

ಶ್ರೀರಾಮಚಂದ್ರ ಮಿಷನ್ನಿನ ಜಂಟಿ ಕಾರ್ಯದರ್ಶಿಯವರಾದ ಸೋ. ಎ.ಪಿ. ದೊರೈಯವರು ಡಿಸೆಂಬರ್ 27ರಂದು ಆಶ್ರಮದ ನಿವೇಶನದ ನೋಂದಣಿಗಾಗಿ ಕರ್ನೂಲಿಗೆ ಆಗಮಿಸಿದರು. ಈ ನಿವೇಶನದಲ್ಲಿ ಆಶ್ರಮಕ್ಕಾಗಿ 10 ಎಕರೆ ಹಾಗು ಅಭ್ಯಾಸಿಗಳ ವಸತಿ ಬಡಾವಣೆಯ ಸೌಲಭ್ಯಕ್ಕಾಗಿ 30 ಎಕರೆ ಪ್ರದೇಶ ಲಭ್ಯವಿದೆ. ಸತ್ಸಂಗದ ನಂತರ ಸೋ. ದೊರೈಯವರು ಈ ಹೊಸ ನಿವೇಶನಕ್ಕೆ ಭೇಟಿ ನೀಡಿದರು. ಈ ಪ್ರದೇಶವು ಕರ್ನೂಲಿನಿಂದ 13 ಕಿ.ಮಿ. ದೂರದಲ್ಲಿ ಬಸ್ತಿಪಾಡು ಎಂಬ ಗ್ರಾಮದ ಸರಹದ್ದಿನಲ್ಲಿದೆ. ನಂತರ ಅವರು 'ಗುರುಗಳನ್ನು ಹೇಗೆ ಸದಾ ಸಂತೋಷದಲ್ಲಿಡಬಲ್ಲೆವು' ಎಂಬುದರ ಬಗ್ಗೆ ಸಾಮೂಹಿಕ ಚರ್ಚೆಯಲ್ಲಿ ಪಾಲ್ಗೊಂಡರು. ವಿಚಾರಗಳ ಮಂಡನೆಯ ಅನಂತರ ಅವರು, ಮನುಷ್ಯಕುಲದ ನಡುವೆ ಸಹಜ ಭ್ರಾತೃತ್ವವನ್ನು ಪೋಷಿಸಲು ನಮ್ಮಲ್ಲಿರುವ ಭೇದಗಳು ಹಾಗು ಪ್ರತಿಷ್ಠೆಗಳನ್ನು ತೊರೆಯುವ ಬಗ್ಗೆ ಮಾತನಾಡಿದರು. ಗುರುಗಳಿಗೆ ಸಂತೋಷವನ್ನುಂಟುಮಾಡಲು ನಮ್ಮ ಆಶ್ರಮಗಳ ಗರಿಷ್ಠ ಉಪಯೋಗವನ್ನು ಪಡೆದುಕೊಳ್ಳಲು ಅವರು ಕರೆ ನೀಡಿದರು. ಭೋಜನದ ನಂತರ ಪ್ರಶ್ನೋತ್ತರ ಕಾರ್ಯಕ್ರಮ ನಡೆಯಿತು. ಇದರಲ್ಲಿ ಸಹಜ ಮಾರ್ಗದ ಸಾಧನೆಯ ಬಗ್ಗೆ ಸ್ಪಷ್ಟನೆಗಳನ್ನು ನೀಡಲಾಯಿತು.

ಸಂಜೆಯ ಸತ್ಸಂಗದ ನಂತರ ಪ್ರಾಧ್ಯಾಪಕರಿಗಾಗಿ ಒಂದು ಮುಕ್ತ ಸಭೆಯನ್ನು ಆಯೋಜಿಸಲಾಗಿತ್ತು. ಬಹು ದೂರದ ನಂದ್ಯಾಲ್ ಮತ್ತು ನಂದಿಕೊಟ್ಕೂರ್‌ಗಳಿಂದ ಅಭ್ಯಾಸಿಗಳು ಸೇರಿದಂತೆ ಒಟ್ಟು 60 ಪ್ರಾಧ್ಯಾಪಕರು ಭಾಗವಹಿಸಿದ್ದರು

ಡಿಸೆಂಬರ್ 28ರಂದು ಸತ್ಸಂಗದ ನಂತರ ಕ್ರಯಪತ್ರದ ನೋಂದಣಿ ಮಾಡಿಸಲಾಯಿತು. ಹೊಸ ನಿವೇಶನಕ್ಕೆ ಹೊರಟ ತಂಡದಲ್ಲಿ 200 ಅಭ್ಯಾಸಿಗಳು ಭಾಗವಹಿಸಿದ್ದರು. ಕೆಲವು ಯುವ ಅಭ್ಯಾಸಿಗಳಿಗೆ ಮಾತನಾಡುವಂತೆ ಕೇಳಲಾಯಿತು. ಇದರ ನಂತರ ಕೇಂದ್ರದ ಸಂಚಾಲಕರಾದ ಸೋ. ರವೀಂದ್ರನಾಥ್ ಹಾಗು ವಲಯ ಸಂಚಾಲಕರಾದ ಸೋ. ಗಂಗಾಧರ್ ಮತ್ತಿತರು ಮಾತನಾಡಿದರು. ಅಭ್ಯಾಸಿಗಳ ವಸತಿ ಬಡಾವಣೆಯ ಶೀಘ್ರ ಅಭಿವೃದ್ಧಿಗಾಗಿ ಹಾಗು ಆಶ್ರಮದ ಪಕ್ಕದಲ್ಲಿ ಸಮುದಾಯ ಭವನದ ಬಗ್ಗೆ ಗುರುಗಳು ನೀಡಿರುವ ಮಾರ್ಗಸೂಚಿಯನ್ನು ಸೋ. ದೊರೈಯವರು ತಿಳಿಸಿದರು. ಸಮಾವೇಶವು ಸತ್ಸಂಗದೊಂದಿಗೆ ಮುಕ್ತಾಯಗೊಂಡಿತು.





## ಶೋಲಾಪುರ ಆಶ್ರಮ, ಮಹಾರಾಷ್ಟ್ರ

ಗುರುಗಳು ಶೋಲಾಪುರ ಆಶ್ರಮದ ಧ್ಯಾನಮಂದಿರವನ್ನು ನೇರ ವೀಡಿಯೊ ಮೂಲಕ ಉದ್ಘಾಟಿಸಿದರು. ಶೋಲಾಪುರ ಆಶ್ರಮವು ಒಂದೂವರೆ ಎಕರೆ ಪ್ರದೇಶವುಳ್ಳದ್ದಾಗಿದ್ದು, ಪಟ್ಟಣದಿಂದ ಅಕ್ಕಲಕೋಟೆ ರಸ್ತೆಯಲ್ಲಿ 5 ಕಿ.ಮೀ. ದೂರದಲ್ಲಿದೆ. ಧ್ಯಾನಮಂದಿರವು ಸುಮಾರು 3500 ಚದರಡಿಯಷ್ಟಿದ್ದು, 850 ಅಭ್ಯಾಸಿಗಳು ಕುಳಿತುಕೊಳ್ಳಬಹುದಾಗಿದೆ. ಬೇವು ಮತ್ತು ಅರಳಿ ಮರಗಳನ್ನೊಳಗೊಂಡಂತೆ ಸುಮಾರು 500 ವಿವಿಧ ವೃಕ್ಷಗಳಿದ್ದು, ಸುತ್ತಲೂ ಹಸಿರು ತುಂಬಿದ್ದು ಗುರುಗಳಿಗೆ ಸಂತಸ ತಂದಿದೆ. ವೀಡಿಯೊ ದೃಶ್ಯಾವಳಿಯ ಮೂಲಕ ಪರಿಸರವನ್ನು ವೀಕ್ಷಿಸಿದ ಗುರುಗಳು ಆಶ್ರಮದ ಬಗ್ಗೆ ಸವಿಸ್ತಾರವಾಗಿ ಪರಿಶೀಲನೆ ನಡೆಸಿದರು. ಗುರುಗಳು 23 ವರ್ಷಗಳ ಹಿಂದೆ ಶೋಲಾಪುರಕ್ಕೆ ಬಂದಿದ್ದಾಗ, ದೂರವಾಣಿ ಗೋಪುರದವರೆಗೆ ನಡೆದು ದೂರವಾಣಿ ಕಚೇರಿಯಿಂದ ಚೆನ್ನೈನ ತಮ್ಮ ಮನೆಯವರೊಂದಿಗೆ ಮಾತನಾಡಿದ್ದನ್ನು ನೆನೆಸಿಕೊಂಡರು. ಈಗಿನ ಆಶ್ರಮದ ಪ್ರದೇಶ ಅಲ್ಲಿಂದ ಸರಿಯಾಗಿ ಅರ್ಧ ಕಿ.ಮೀ. ದೂರದಲ್ಲಿದೆ. ವೀಡಿಯೊ ದೃಶ್ಯಾವಳಿಯನ್ನು ವೀಕ್ಷಿಸಿದ ಗುರುಗಳು ಆಶ್ರಮವನ್ನು ಪೂಜ್ಯ ಬಾಬೂಜಿ ಮಹಾರಾಜರಿಗೆ ಅರ್ಪಣೆ ಮಾಡಿದರು. ಈ ಸಂತೋಷಭರಿತ ಸಂದರ್ಭದಲ್ಲಿ ಗುರುಗಳು ಅಲ್ಲಿ ನೆರೆದಿದ್ದ ಶೋಲಾಪುರದ ಕೆಲವು ಅಭ್ಯಾಸಿಗಳಿಗೆ ಪ್ರಸಾದವನ್ನು ವಿತರಣೆ ಮಾಡಿದರು.

## ಮೊರಾದಬಾದ್

ಸಹೋದರ ರಾಜಕಿಶೋರ್‌ರವರು ಜನವರಿ 27ರಂದು ಮೊರಾದಬಾದ್ ಆಶ್ರಮದಲ್ಲಿ 48 ಅಭ್ಯಾಸಿಗಳಿಗೆ ಒಂದು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಸಣ್ಣ ಗುಂಪುಗಳಲ್ಲಿ 4 ಸಮಾವೇಶಗಳನ್ನು ನಡೆಸಲಾಯಿತು. ಮೊದಲನೇ ಸಮಾವೇಶದಲ್ಲಿ ಆತ್ಮಾವಲೋಕನ ಮತ್ತು ಆಂತರಿಕ ಜಾಗೃತಿಯ ಬಗ್ಗೆ ಒತ್ತು ಕೊಡಲಾಗಿತ್ತು. ವಿಚಾರಗಳನ್ನು ವಿಶದೀಕರಿಸಲು ಗುರುಗಳ ಉಲ್ಲೇಖಗಳು ಮತ್ತು ಬೋಧನೆಗಳನ್ನು ಹೆಚ್ಚುಹೆಚ್ಚಾಗಿ ಉಪಯೋಗಿಸಿಕೊಳ್ಳಲಾಯಿತು. ಎರಡನೆಯ ಸಮಾವೇಶದಲ್ಲಿ ಧ್ಯಾನದ ಎಲ್ಲ ಮಜಲುಗಳ ಬಗ್ಗೆ ತಿಳಿಸಿಕೊಟ್ಟದ್ದಲ್ಲದೆ ವಿಶದೀಕರಣಗಳನ್ನು ವಿಡಿಯೊ ದೃಶ್ಯಾವಳಿಯ ಮೂಲಕ ವಿವರಿಸಲಾಯಿತು. ಇದರಲ್ಲಿ ದಿವ್ಯಲೋಕದ ಪಿಸುಮಾತುಗಳಿಂದ ಆಯ್ದ ಸಂದೇಶಗಳೂ ಸಹ ಇದ್ದವು.

ಮೂರನೆಯ ಸಮಾವೇಶವು ತಂಡಗಳ ಮೂಲಕ ಕಾರ್ಯನಿರ್ವಹಣೆ ಬಗೆಗೆ ವಿಚಾರಗಳನ್ನು ಕೇಂದ್ರೀಕರಿಸಲಾಗಿತ್ತು. ಅಭ್ಯಾಸಿಗಳನ್ನು ಜೋಡಿ ಗುಂಪುಗಳಲ್ಲಿ ಕಾರ್ಯತಃ ನಿರ್ವಹಣೆಯನ್ನು ಮಾಡಿ ಅನುಭವ ಪಡೆಯಲು ಕೆಲಸಗಳನ್ನು ನಿಗದಿಪಡಿಸಲಾಗಿತ್ತು. ಚಹಾ ವಿರಾಮದ ನಂತರ, ಕೊನೆಯಲ್ಲಿ ವಿಡಿಯೊ ದೃಶ್ಯಾವಳಿ, ತರುವಾಯ ಅದರ ಬಗೆಗೆ ಆಂತರಿಕ ಚಿಂತನೆಗೆ ಅವಕಾಶ ಮಾಡಲಾಗಿತ್ತು.

ಕಾರ್ಯಕ್ರಮದ ಕೊನೆಗೆ ಎಲ್ಲ ಅಭ್ಯಾಸಿಗಳು ಶಿಬಿರದ ಕಾಲಾವಧಿಯಲ್ಲಿ ತಮ್ಮ ತಮ್ಮ ಅನಿಸಿಕೆ ಮತ್ತು ಫಲಿತಾಂಶದ ಅನುಭವಗಳನ್ನು ಹಂಚಿಕೊಂಡರು.






## ಕೇರಳದ ಪ್ರವಾಸ

ಜಂಟಿ ಕಾರ್ಯದರ್ಶಿ ಸೋ. ಎ.ಪಿ. ದೊರೈಯವರು, ಮುಖ್ಯವಾಗಿ ಶಿಕ್ಷಣ ಸಂಸ್ಥೆಗಳಲ್ಲಿ ಮುಕ್ತ ಸಭೆಗಳು ಹಾಗು ಸಮಾವೇಶಗಳನ್ನು ನಡೆಸಲು ಕೇರಳದಲ್ಲಿ ಪ್ರವಾಸ ಮಾಡಿದರು. ತಿರುವನಂತಪುರಕ್ಕೆ ಬಂದ ನಂತರ, ಜನವರಿ 17 ಮತ್ತು 18ರಂದು ಅಲ್ಲಿನ ಸೈನಿಕರ ಶಾಲೆ ಹಾಗು ವಿಶ್ವವಿದ್ಯಾಲಯದ ಕಾಲೇಜಿನಿಂದ ಕಾರ್ಯಕ್ರಮ ಪ್ರಾರಂಭಿಸಿದರು. ಜನವರಿ 19ರಂದು ಅವರು ಅಟ್ಟಿಂಗಳ್‌ನಲ್ಲಿ 2 ತಂಡಗಳು ಹಾಗು ಕೊಲ್ಲಮ್‌ನಲ್ಲಿ ಒಂದು ತಂಡವನ್ನುದ್ದೇಶಿಸಿ ಮಾತನಾಡಿದರು. ಜನವರಿ 20ರಂದು ಅವರು ಪಟ್ಟಣಂತಿಟ್ಟ ಮತ್ತು ಚೆಂಗನ್ನೂರ್ ಜಿಲ್ಲೆಗಳಲ್ಲಿ ಎರಡು ಸಮಾವೇಶಗಳನ್ನು ನಡೆಸಿಕೊಟ್ಟರು. ಜನವರಿ 21 ರಂದು ಕೊಟ್ಟಾಯಂನ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಒಂದು, ಮಹಾತ್ಮ ಗಾಂಧಿ ವಿಶ್ವವಿದ್ಯಾಲಯದಲ್ಲಿ ಒಂದು, ಕುಮಾರನೆಲ್ಲೂರಿನ ಪ್ರೌಢ ಶಾಲೆಯಲ್ಲಿ ಹಾಗು ಸಂಜೆ ಕೊಚ್ಚಿಯ ರಾಮಕೃಷ್ಣ ಸೇವಾಶ್ರಮದಲ್ಲಿ ಸಮಾವೇಶಗಳನ್ನು ನಡೆಸಿಕೊಟ್ಟರು. ಜನವರಿ 22 ರಂದು ಅಲುವ ಆಶ್ರಮದ ಅಭ್ಯಾಸಿಗಳೊಂದಿಗೆ ಮಾತನಾಡಿದರು. ನಂತರ ಪರಕ್ಕದವಾಡುವಿನ ಎಸ್.ಎಸ್.ಎಸ್ ಪ್ರೌಢ ಶಾಲೆಯಲ್ಲಿ, ಕರುಮಲ್ಲೂರಿನ ಶ್ರೀ ನಾರಾಯಣಗುರು ವಿಜ್ಞಾನ ಮತ್ತು ತಂತ್ರಜ್ಞಾನ ಕಾಲೇಜಿನಲ್ಲಿ ಮತ್ತು ಅಲುವದಲ್ಲಿ ವಿದ್ಯಾಧಿರಾಜ ವಿದ್ಯಾ ಭವನ್ ಪ್ರೌಢಶಾಲೆಯಲ್ಲಿ ಸಮಾವೇಶಗಳನ್ನು ನಡೆಸಿಕೊಟ್ಟರು.

ಜನವರಿ 23ರಂದು ನಾಯರಂಬಳಂನಲ್ಲಿನ ಲೊಬೇಲಿಯ ಪ್ರೌಢಶಾಲೆಯಲ್ಲಿ ಸಮಾವೇಶ ನಡೆಯಿತು. ತ್ರಿಶೂರ್ ಆಶ್ರಮದ ಅಭ್ಯಾಸಿಗಳೊಂದಿಗೆ ಸಂಜೆ ಹಾಗು ಯುವಜನರೊಂದಿಗೆ 24ರಂದು ಬೆಳಿಗ್ಗೆ ಪರಸ್ಪರ ಮಾತನಾಡಿದರು. ಅಂಬಳೂರಿನಲ್ಲಿ ಪರಸ್ಪರ ಮಾತುಕತೆ ಮತ್ತು ಅದೇ ದಿನ ಸಂಜೆ ಪಾಲಕ್ಕಾಡ್ ನಲ್ಲಿ ಮುಕ್ತ ಸಭೆಯಲ್ಲಿ ಭಾಗವಹಿಸಿದರು. ಜನವರಿ 25ರಂದು ಮಾಲಾಪುರಂ, ಕೋಳಿಕೋಡು ಮತ್ತು ವಡಾಕರ ಕೇಂದ್ರಗಳಲ್ಲಿ ಮುಕ್ತ ಸಭೆಗಳನ್ನು ನಡೆಸಿಕೊಟ್ಟರು. ಕೊನೆಯ ಮುಕ್ತ ಸಭೆ ಪಯ್ಯನೂರಿನಲ್ಲಿ ಜನವರಿ 27ರಂದು ನಡೆಸಿಕೊಟ್ಟರು.

ಈ ಸಮಾವೇಶಗಳಲ್ಲಿ ಸೋ. ದೊರೈಯವರು ಗೃಹಸ್ಥಜೀವನದಲ್ಲಿ ಅಧ್ಯಾತ್ಮದ ಅವಶ್ಯಕತೆ, ಮೌಲ್ಯಾಧಾರಿತ ಜೀವನ ಶೈಲಿ, ಸಂಸ್ಕಾರಗಳಿಂದ ಪಾರಾಗಲು ಹೇಗೆ ಸಹಜ ಮಾರ್ಗ ಆಧುನಿಕ ಮಾನವನಿಗೆ ಸಹಾಯಮಾಡಬಲ್ಲುದು, ಧರ್ಮ ಮತ್ತು ಅಧ್ಯಾತ್ಮದ ನಡುವಿನ ವ್ಯತ್ಯಾಸಗಳು, ದೇವರ ಬಗೆಗಿನ ಕಲ್ಪನೆಗಳು ಹಾಗು ಮೌಲ್ಯಾಧಾರಿತ ಹೊಸ ಜನಾಂಗವನ್ನು ಸೃಷ್ಟಿಸಲು ಪ್ರಾಧ್ಯಾಪಕರ ಜವಾಬ್ದಾರಿಯ ಬಗ್ಗೆ ಅವರು ಮಾತನಾಡಿದರು. ಆಶ್ರಮಗಳ ಬಗೆಗಿನ ಭಾವನೆಗಳನ್ನು ತಿಳಿಯಲೋಸುಗ ಹಾಗು ಶಂಕೆಗಳನ್ನು ಬಗೆಹರಿಸಿಕೊಳ್ಳುವೆಡೆಗೆ ಸಹ ಅಭ್ಯಾಸಿಗಳೊಂದಿಗೆ ಅವರು ಸಮಾವೇಶಗಳನ್ನು ನಡೆಸಿಕೊಟ್ಟರು.

## ತಿರುಚ್ಚಿ

ತಿರುಚ್ಚಿಯಲ್ಲಿರುವ ಸುರಿಯೂರ್ ಭಾರತಿದಾಸನ್ ವಿಶ್ವವಿದ್ಯಾಲಯದಲ್ಲಿ ಫೆಬ್ರವರಿ 4ರಂದು ಒಂದು ಮುಕ್ತ ಸಭೆಯನ್ನು ಆಯೋಜಿಸಲಾಗಿತ್ತು. ಸುಮಾರು 60 ಸ್ನಾತಕೋತ್ತರ ಪದವಿಧರರು, ಸಂಶೋಧನ ವಿದ್ಯಾರ್ಥಿಗಳು, ತಾಂತ್ರಿಕ ಅಧಿಕಾರಿಗಳು ಹಾಗು ವಿವಿಧ ಇಲಾಖೆಗಳ ಪ್ರಾಧ್ಯಾಪಕರು ಭಾಗವಹಿಸಿದ್ದರು. ಕುಮಾರಿ ಅನ್ನಾಜಾಯ್ಸಿ ಸಭೆಗೆ ಸ್ವಾಗತ ಕೋರಿದರು ಹಾಗು ಶ್ರೀ ರಾಮಚಂದ್ರ ಮಿಷನ್ನಿನ ಉಪಾಧ್ಯಕ್ಷರಾದ ಸೋ. ಕಮಲೇಶ್‌ಪಟೇಲ್ ರವರನ್ನು ಪರಿಚಯಿಸಿದರು. ಸೋ. ಕಮಲೇಶ್‌ಪಟೇಲ್‌ರವರು ಧ್ಯಾನದ ಪ್ರಾಮುಖ್ಯತೆ ಹಾಗು ಅದರ ಹಿಂದಿನ ವೈಜ್ಞಾನಿಕ ಹಿನ್ನೆಲೆಯ ಬಗ್ಗೆ ಒತ್ತಿ ಹೇಳಿದರು. ಸಭೆಯ ನಂತರ ಅವರು ಭಾಗವಹಿಸಿದ್ದ ಕೆಲವರೊಡನೆ ಮಾತನಾಡಿದರು. ಅದರಲ್ಲಿ ಹಲವರು ಸಹಜಮಾರ್ಗದ ಅಭ್ಯಾಸಿಗಳಾಗಲು ಒಲವು ತೋರಿದರು.

ಫೆಬ್ರವರಿ 12 ರಂದು, ತಿರುಚ್ಚಿಯ ಭಾರತಿದಾಸನ್ ವಿಶ್ವವಿದ್ಯಾಲಯದ ಸಸ್ಯ ವಿಜ್ಞಾನ ಕೇಂದ್ರದ ಸಭಾಂಗಣದಲ್ಲಿ ಒಂದು ಮುಕ್ತ ಸಭೆಯನ್ನು ಆಯೋಜಿಸಲಾಗಿತ್ತು. ಸುಮಾರು 50 ವಿದ್ಯಾರ್ಥಿಗಳು, ಸಂಶೋಧನ ಪಂಡಿತರು ಹಾಗು ಕಡಲ ಜೈವಿಕ ತಂತ್ರಜ್ಞಾನ ಮತ್ತು ಕಡಲ ವಿಜ್ಞಾನ ಇಲಾಖೆಯ ಪ್ರಬೋಧಕರು ಭಾಗವಹಿಸಿದ್ದರು. ತಿರುಚ್ಚಿ ಕೇಂದ್ರದ ಪ್ರಧಾನ ವ್ಯವಸ್ಥಾಪಕರಾದ ಸೋ. ಟಿ.ಎಸ್. ರಘುರಾಮ್‌ರವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಅವರೊಡನೆ ವಿದ್ಯಾರ್ಥಿಗಳು ಮಾತನಾಡಿದರು ಮತ್ತು ಕೆಲವರು ನಮ್ಮ ಪದ್ಧತಿಯ ಅನುಭವಗಳನ್ನು ಪಡೆಯಲು ಇಚ್ಛೆ ವ್ಯಕ್ತಪಡಿಸಿದರು.

## ಗೋಲಾ ಗೋಕರ್ಣನಾಥ್, ಉತ್ತರ ಪ್ರದೇಶ

ಜನವರಿ 20ರಂದು ಉತ್ತರ ಪ್ರದೇಶದ ಗೋಲಾ ಗೋಕರ್ಣನಾಥ್ ಕೇಂದ್ರದಿಂದ ಹಲವಾರು ಶಾಲೆಗಳ 110 ಅಧ್ಯಾಪಕರಿಗಾಗಿ ಒಂದು ಕಾರ್ಯಾಗಾರವನ್ನು ವಲಯ ಸಂಚಾಲಕರಾದ ಸೋ. ಪ್ರಭಾತ್‌ರವರ ಸಹಯೋಗದಲ್ಲಿ ಆಯೋಜಿಸಲಾಗಿತ್ತು. ಸೋ. ಸುಜಾತರವರು 'ವ್ಯಕ್ತಿತ್ವದ ಕೇಂದ್ರೀಕರಣ, ಸಿದ್ಧಾಂತ, ಕಾರ್ಯವಿಧಾನ' ಹಾಗು ಸೋ. ಪಂಕಜ್‌ರವರು 'ಆಧುನಿಕ ಸಮಾಜದಲ್ಲಿ ಅಧ್ಯಾಪಕರ ಪಾತ್ರ' ಎಂಬ ವಿಷಯದ ಬಗ್ಗೆ ಮಾತನಾಡಿದರು. ಮಧ್ಯಾಹ್ನದ ಊಟದ ನಂತರ ಸೋ. ಹೇಮರಾಜ್‌ರವರು ಇಂದಿನ ಯುವಜನರ ಸಮಸ್ಯೆಗಳು ಮತ್ತು ಅವುಗಳ ಪರಿಹಾರಗಳ ಬಗ್ಗೆ ವಿವರಣೆ ನೀಡಿದರು. ಅಧ್ಯಾಪಕರು ಸಭಿಕರೊಡನೆ ಸಹ ತಮ್ಮ ಅನುಭವಗಳನ್ನು ಹಂಚಿಕೊಂಡರು. ಕಾರ್ಯಾಗಾರವನ್ನು ಉತ್ತಮವಾಗಿ ವ್ಯವಸ್ಥೆಗೊಳಿಸಲಾಗಿತ್ತು ಮತ್ತು ಸುಮಾರು 40 ಜನ ಸ್ವಯಂ ಸೇವಕರು ಅದರ ಯಶಸ್ಸಿಗೆ ಶ್ರಮಿಸಿದರು.





## ಗುಜರಾತ್ ವಲಯ ಸಭೆ (ವಲಯ 6 ಎ, 6 ಬಿ)

ಜನವರಿ 24 ರಂದು ಸೋ. ಸಿ. ರಾಜಗೋಪಾಲನ್ ರವರು ಅಹಮದಾಬಾದಿನ ಕಾರ್ಯಕರ್ತರು ಹಾಗು ಪ್ರಶಿಕ್ಷಕರನ್ನು ಭೇಟಿ ಮಾಡಲು ಆಗಮಿಸಿದರು. ಪ್ರಶಿಕ್ಷಕರ ಭೇಟಿಯಲ್ಲಿ ಅವರು, ಅಹಮದಾಬಾದಿನ ಪ್ರಶಿಕ್ಷಕರ ನಿಯಮಿತ ಸಾಧನೆ ಹಾಗು ತಮ್ಮ ನಡುವಿನ ಭ್ರಾತೃತ್ವದ ಅಗತ್ಯದ ಬಗ್ಗೆ ಒತ್ತಿ ಹೇಳಿದರು. ಅವರು ಪ್ರಶಿಕ್ಷಕರಿಗೆ ಉಪನಗರಗಳಿಗೆ ಭೇಟಿ ನೀಡಿ ಅಭ್ಯಾಸಿಗಳನ್ನು ಮಿಷನ್ನಿನ ಕಾರ್ಯಗಳಿಗೆ ತರಪೇತಿಗೊಳಿಸಬೇಕೆಂದು ಪ್ರೋತ್ಸಾಹಿಸಿದರು.

ಜನವರಿ 25ರಂದು ಸೋ. ರಾಜಗೋಪಾಲನ್ ರವರು ವಲಯ 6 ಎ ಮೆಹ್ಸಾನ, ಪಾಲನ್ಪುರ್, ಹಿಮ್ಮಾರ್ ನಗರ್, ಜಾಮ್ ನಗರ್, ಭುಜ್ ಮತ್ತು ರಾಜ್‌ಕೋಟ್‌ನ ಪ್ರಶಿಕ್ಷಕರನ್ನು ಭೇಟಿ ಮಾಡಿದರು. ನಂತರ ಅವರು ಉಪನಗರಗಳ ಸಹಯೋಜಕರುಗಳನ್ನು ಭೇಟಿ ಮಾಡಿದರು. ಮರು ದಿನ 6 ಎ ಮತ್ತು 6 ಬಿ ವಲಯಗಳ ಪ್ರಶಿಕ್ಷಕರಿಗಾಗಿ ಸಭೆಯನ್ನು ನಡೆಸಿದರು. ಇದರೊಡನೆ 'ಸಾಧನೆ ಮತ್ತು ಪ್ರಶಿಕ್ಷಕರ ಪಾತ್ರ' ಎಂಬುದರ ಬಗ್ಗೆ ಪ್ರಶ್ನೋತ್ತರ ಕಾರ್ಯಕ್ರಮ ಸಹ ಒಳಗೊಂಡಿತ್ತು.

ಜನವರಿ 27ರಂದು ಸೋ. ರಾಜಗೋಪಾಲನ್‌ರವರು 'ಸಾಧನೆಯಲ್ಲಿ ಮೂಲಭೂತ ಅಂಶಗಳು' ಮತ್ತು 'ಶ್ರೀ ರಾಮಚಂದ್ರ ಮಿಷನ್ನಿನ ಪರಿಚಯ' ಎಂಬುದರ ಬಗ್ಗೆ ಮಾತನಾಡಿದರು. ಅವರು ನವ್‌ಸಾರಿ, ಬರೋಡ, ಭಾರುಚ್, ಅಂಕ್ಲೇಶ್ವರ್ ಮತ್ತು ಸೆಲಂಬಗಳ ಪ್ರಶಿಕ್ಷಕರನ್ನು ಭೇಟಿ ಮಾಡಿದರು.

ಈ ಮೂರೂ ದಿನಗಳಂದು, ಎಲ್ಲರಿಗೂ ಗುರುಗಳು ತಮ್ಮ ನಡುವೆಯೇ ಇದ್ದಂತೆ ಭಾಸವಾಯ್ತು. ಪ್ರತಿಯೊಬ್ಬರೂ ಸಹೋದರ ರಾಜಗೋಪಾಲನ್‌ರವರಿಗೆ ಧನ್ಯವಾದಗಳನ್ನು ಅರ್ಪಿಸಿದರು ಹಾಗು ಮಿಷನ್ನಿನ ಬೆಳವಣಿಗೆಯಲ್ಲಿ ಬದ್ಧರಾಗಿರಲು ಸಂಕಲ್ಪ ಕೈಗೊಂಡರು.

## ಸತ್ಕೋಲ್ ಆಶ್ರಮ, ಉತ್ತರಖಂಡ

ಡಿಸೆಂಬರ್ 30 ಮತ್ತು 31 ರಂದು, ಉತ್ತರಖಂಡದಿಂದ 44 ಪ್ರಶಿಕ್ಷಕರು, ಪ್ರಶಿಕ್ಷಕರ ವಿಕಾಸ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವು ಹಿಂದಿ ಮತ್ತು ಆಂಗ್ಲ ಭಾಷೆಯಲ್ಲಿ ಸಹೋದರಿಯರಾದ ಛವಿ, ಪೂನಮ್ ಬಬ್ಬರ್, ವಿಮಲಾ ಶೆರಾನ್ ಮತ್ತು ಸೋ. ಜಿಗ್ನೇಶ್ ಅವರಿಂದ ನಡೆಸಲ್ಪಟ್ಟಿತು.

ಕಡೆಯವರೆಗೂ ಇದ್ದ ಗುರುಗಳ ಸಂಪೂರ್ಣ ಪ್ರಭಾವದೊಂದಿಗೆ, ತೆರೆದ ಹೃದಯದೊಡನೆ ವಿಕಸಿತ ಸೋದರ ಪ್ರೇಮಭಾವ ಹೊರಸೂಸಿರಲು, ನೆರೆದ ಎಲ್ಲರಿಂದ ಪರಿಪೂರ್ಣ ಅಭ್ಯಾಸಿಗಳಾಗಿ ಹೊರಹೊಮ್ಮಿ ಗುರುಗಳಿಗೆ ತೃಪ್ತಿ ತರುವಂತೆ ಸೇವೆ ಸಲ್ಲಿಸಲು ನಿರ್ಧಾರ ಕೈಗೊಂಡರು.

ಪ್ರತಿ ಸಮಾವೇಶದ ನಂತರ ಪರಿಣತಿ ಹಾಗು ಪರಿಪೂರ್ಣತೆಗಾಗಿ ಕೆಲವು ತರಪೇತಿ ಕಾರ್ಯಕ್ರಮಗಳು ನಡೆದವು. ಅದರಲ್ಲಿ ಕೆಲವು ಪ್ರಾಯೋಗಿಕವಾಗಿದ್ದುವು. ಮೌನದೊಳಗೆ ಒಂದಾಗಿ, ಆಳವಾಗಿ ಒಳಹೊಕ್ಕು, ಮನನ ಮಾಡಿ, ನಿಜಾರ್ಥಗಳೊಡನೆ ಮಿಂದು ಉಲ್ಲಾಸದಿಂದ ಹೊರಬಂದು, ಗುರಿಯೆಡೆಗೆ ಹೊಸಚೈತನ್ಯದೊಂದಿಗೆ ಹಾಗು ಧೃಢ ವಿಶ್ವಾಸ ಮತ್ತು ಉದ್ದೇಶದ ಗಂಭೀರ ಅರಿವಿನೊಡನೆ ಮುನ್ನಡೆಯಲು ಬಾಬೂಜಿ ಮಹಾರಾಜರ ದಿವ್ಯಲೋಕದ ಪಿಸುಮಾತುಗಳಿಂದ ಆಯ್ದ ಕೆಲವು ಸಂದೇಶಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು.

## ಪ್ರಶಿಕ್ಷಕರ ಸಮಾವೇಶ, ತಿರುಚ್ಚಿ

ಸೋ. ಸಂತೋಷ್ ಶ್ರೀನಿವಾಸನ್ ರವರ ಸಹಯೋಗದೊಂದಿಗೆ, ತಿರುಚ್ಚಿಯಲ್ಲಿ ಒಂದು ಪ್ರಶಿಕ್ಷಕರ ಸಮಾವೇಶ ನಡೆಯಿತು. ಭಾರತದ ವಿವಿಧ ಪ್ರದೇಶಗಳಿಂದ 63 ಹಾಗು ವಿದೇಶಗಳಿಂದ ಹಲವರು ಪ್ರಶಿಕ್ಷಕರು ಆಗಮಿಸಿದ್ದರು. ಅವರಿಗೆ ಸ್ಥಳೀಯವಾಗಿ ಉಳಿದುಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು.

ಈ ಕಾರ್ಯಕ್ರಮದ ಪ್ರತಿ ಘಟ್ಟದಲ್ಲೂ ಗುರುಗಳ ಅಸ್ತಿತ್ವ ಹೊರಹೊಮ್ಮಿತ್ತು. ಪ್ರಶಿಕ್ಷಕರ ಪಾತ್ರ ಮತ್ತು ಅವರ ಮತ್ತು ಅವರಿಗೆ ಒಪ್ಪಿಸಲಾದ ಅಭ್ಯಾಸಿಗಳ ಬಗ್ಗೆ ದೃಢವಾದ ಬುನಾದಿ ಮತ್ತು ನಿರ್ದಿಷ್ಟ ಸೂತ್ರದ ನಿರ್ಮಾಣ ಮತ್ತು ಅವರಲ್ಲಿ ಅಭ್ಯಾಸಿಗಳ ಸಾಧನೆಯ ಪ್ರಗತಿಯ ಬಗ್ಗೆ ಇರಬೇಕಾದ ಅವಶ್ಯಕ ಮನೋಭಾವಗಳು – ಇವು ಕಾರ್ಯಕ್ರಮದ ಮುಖ್ಯ ಉದ್ದೇಶಗಳಾಗಿದ್ದವು.

ಗುರುಗಳು ಜನವರಿ 22ರಂದು ಅಲ್ಲಿಗೆ ಆಗಮಿಸಿದರು. ನಿಗದಿತ ವೇಳಾಪಟ್ಟಿಯಂತೆ ಸಮಾವೇಶವು ಜರುಗಿತು. ಗುರುಗಳ ಭಾಷಣ, ಆತ್ಮಾವಲೋಕನ, ಗುಂಪಿನಲ್ಲಿ ಚರ್ಚೆಗಳು, ಪಾತ್ರಗಳಿಗೆ ತಕ್ಕ ಅಭಿನಯದ ಬಗ್ಗೆ ಜೀವತುಂಬಿದ ಕಾರ್ಯಕ್ರಮಗಳು, ನಂತರ ಮತ್ತೊಮ್ಮೆ ಸಾಧನೆಯ ಬಗ್ಗೆ ಆತ್ಮಾವಲೋಕನ, ಆಮೇಲೆ ಗುರುಗಳು ಸತ್ಸಂಗವನ್ನು ನಡೆಸಿಕೊಟ್ಟರು.

ಗುರುಗಳು ಸತ್ಸಂಗವನ್ನು ನಡೆಸಿಕೊಟ್ಟು ಪ್ರಶಿಕ್ಷಕರು ಹೇಗಿರಬೇಕೆಂಬುದರ ಬಗ್ಗೆ ಭಾಷಣ ಮಾಡಿದರು. ಪ್ರತಿದಿನವೂ ಕಾರ್ಯಕ್ರಮ ಸತ್ಸಂಗದೊಂದಿಗೆ ಶುರುವಾಗುತ್ತಿತ್ತು. ಬೈಠಕ್ ನೀಡುವ ವೇಳೆಯಲ್ಲಿ ಗುರುಗಳೊಂದಿಗೆ ಹೇಗೆ ಸಂಪರ್ಕ ಹೊಂದಿರಬೇಕೆಂಬುದು ದಿನಾಂಕ 24ರ ಮುಖ್ಯ ವಿಷಯವಾಗಿತ್ತು.

ಜನವರಿ 25ರಂದು ಸೋ. ಕಮಲೇಶ್‌ಪಟೇಲ್ ರವರು ಸತ್ಸಂಗವನ್ನು ನಡೆಸಿಕೊಟ್ಟರು. ಅವರು ಪ್ರಶಿಕ್ಷಕರ ಪಾತ್ರದ ವಿವಿಧ ಮಜಲುಗಳ ಬಗ್ಗೆ ಮಾತನಾಡಿದರು. ಸಂಜೆ ಸೋ. ಕೃಷ್ಣರವರು ಸಹಜಮಾರ್ಗದ ಬಗ್ಗೆ ತಿಳಿವಳಿಕೆ ಎಷ್ಟರಮಟ್ಟಿಗಿದೆ ಎಂಬುದರ ಬಗ್ಗೆ ಮಾತನಾಡಿದರು ಮತ್ತು ಅದರ ಬಗ್ಗೆ ಪ್ರಶ್ನೋತ್ತರ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಜನವರಿ 26ರಂದು ಗುರುಗಳು ಮಾತನಾಡಿ ಸತ್ಸಂಗವನ್ನು ನಡೆಸಿದರು. ಪ್ರತಿ ಸಂಜೆ ಜಾನಕಿ ಫಾರ್ಮ್‌ನಲ್ಲಿ ಅಭ್ಯರ್ಥಿಗಳು ಕೆಲವು ಸಮಯ ಗುರುಗಳೊಂದಿಗೆ ಕಳೆದು ಅವರೊಡನೆ ಭೋಜನ ಸ್ವೀಕರಿಸಿದರು.

ಸಮಾವೇಶವು ಅಭ್ಯರ್ಥಿಗಳಲ್ಲಿ ಆಳವಾದ ವೈಯುಕ್ತಿಕ ಅನುಭವಗಳನ್ನುಂಟುಮಾಡಿತು. ಅವರೆಲ್ಲರೂ ನವೀಕರಿಸಿದ ಚೈತನ್ಯ ಹಾಗು ತಾವು ಪಡೆದುಕೊಂಡ ಗುರುಗಳ ನಿರ್ದೇಶಿತ ಗಮನದೊಡನೆ ಕಾರ್ಯಪ್ರವೃತ್ತರಾಗಲು ಅಲ್ಲಿಂದ ಹೊರಟರು.





# ಯುವಕರ ಚಟುವಟಿಕೆಗಳು

## ನಾಚಿಪಾಳ್ಯಂ ಆಶ್ರಮ, ಕೊಯಂಬತ್ತೂರು



ಡಿಸೆಂಬರ್ 29–30ರಂದು ಕೊಯಂಬತ್ತೂರಿನ ನಾಚಿಪಾಳ್ಯಂ ಆಶ್ರಮದಲ್ಲಿ, ನೆರವೇರಿಸಲಾದ ಕಾರ್ಯಕ್ರಮದಲ್ಲಿ ಕೊಯಂಬತ್ತೂರು, ಪೊಲ್ಲಾಚಿ ಮತ್ತು ಪಳನಿ ಕೇಂದ್ರಗಳಿಂದ ಮೂವತ್ತು ಯುವಕರು ಭಾಗವಹಿಸಿದರು. ಕಾರ್ಯಕ್ರಮದ ಪ್ರಾರಂಭ ಸತ್ಸಂಗದಿಂದಾಗಿ ನಂತರದ ಪರಿಚಯ ಸತ್ರದಲ್ಲಿ ಒಬ್ಬರೊನ್ನೊಬ್ಬರು ಪರಿಚಯ ಮಾಡಿಕೊಳ್ಳುವ ಸುಸಂಧಿ ದೊರಕಿತು. ಮುಂದಿನ ಸತ್ರಗಳಲ್ಲಿ ಗುರಿ, ವೈಶ್ವಿಕ ತಿಳುವಳಿಕೆ, ಸಾಧನೆಯ ಬಗೆಗಿನ ಮನೋಭಾವ, ಒಗ್ಗಟ್ಟು, ಬಂಧುಭಾವ ಈ ವಿಷಯಗಳ ಆತ್ಮನಿರೀಕ್ಷಣೆ ಮತ್ತು ಗುಂಪುಚರ್ಚೆಗಳಾದವು. ಸಾಂಘಿಕಸ್ಪರ್ಧೆ ಹಾಗು ಹಾಡುಗಾರಿಕೆಗಳು ಸಹಭಾಗಿಗಳಲ್ಲಿ ಕೌಟುಂಬಿಕ ಬಾಂಧವ್ಯ ಹಾಗು ಭ್ರಾತೃತ್ವದ ಭಾವನೆಗಳಿಗೆ ಉತ್ತೇಜನವನ್ನಿತ್ತವು.

'ಸೇವೆಯು ಆಧ್ಯಾತ್ಮಿಕ ಉನ್ನತಿಯ ಬೀಗದಕೈ' ಎಂಬ ವಿಷಯದ ಮೇಲಿನ ಸತ್ರವನ್ನು ವಿಭಾಗೀಯ ಪ್ರಮುಖರಾದ ಸೋ. ವಿಶ್ವನಾಥರಾವ್ ಅವರು ನಿರ್ವಹಿಸಿಕೊಂಡರು. 'ಕ್ರೆಸ್ಟ್' ಮೇಲಿನ ಚರ್ಚಾ ಸತ್ರವು ಯುವಕರಿಗೆ ಅಲ್ಲಿ ನಡೆಸಲಾಗುವ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರೋತ್ಸಾಹನೆಯನ್ನಿತ್ತಿತು.

ಎರಡನೆಯ ದಿನವು ಬಾಬೂಜೀಯವರ ದಿವ್ಯಲೋಕದ ಸಂದೇಶಗಳು ಹಾಗು ಗುರುಗಳ ಭಾಷಣಗಳು, ಯುವಕರಿಗೆ ಪ್ರೋತ್ಸಾಹಿಸುವಂತಹ ಇತರ ದೃಶ್ಯಾವಳಿಗಳಿಂದ ಕೂಡಿತ್ತು.

## ಯುವ ಸಮ್ಮೇಳನ ಪನವೇಲ ಆಶ್ರಮ, ಮುಂಬಯಿ

ಜನವರಿ 26–27ರಂದು ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಗುಜರಾತ ರಾಜ್ಯಗಳಿಂದ ಒಂದು ನೂರಕ್ಕೂ ಹೆಚ್ಚು ಸಹಭಾಗಿಗಳು ಮುಂಬಯಿಯ ಪನವೇಲ ಆಶ್ರಮದಲ್ಲಿ ಸೇರಿಕೊಂಡಿದ್ದರು. 'ಗುರುಗಳ ದೃಷ್ಟಿಕೋನದೆಡೆಗೆ ಒಂದಾಗಿ ಕಾರ್ಯವನ್ನೆಸಗುವದು' ಎಂಬುದು ವಿಷಯುವಾಗಿದ್ದು, ಗುರುಗಳ 'ದೂರದೃಷ್ಟಿಯುಳ್ಳವರಾಗಿರಿ' ಎಂಬ ಭಾಷಣದಿಂದ ಪ್ರೇರಿತರಾಗಿ ಒಟ್ಟಾಗಿ ಒಕ್ಕಟ್ಟಿನಿಂದ ಕೆಲಸ ಮಾಡುವ ಉದ್ದೇಶದಿಂದ ಒಂದೆಡೆಗೆ ಸೇರುವ ಆವಶ್ಯಕತೆಯನ್ನು ಯುವಕರು ಮನಗಂಡರು.

'NASA survival game' ನಂತಹ ಚಟುವಟಿಕೆಗಳು ಒಂದಾಗಿ ಕೆಲಸ ಮಾಡಲು ಬೇಕಾದ ಗುಣಮಟ್ಟವನ್ನು ತಿಳಿಸಿಕೊಟ್ಟವು. ಕ್ರೆಸ್ಟ್ ಮತ್ತು ಪುನಶ್ಚೇತನ ಕೇಂದ್ರಗಳಿಗೆ ಹೋಗಿಬಂದ ಯುವಕರು ತಮ್ಮ ಅನುಭವಗಳನ್ನು ಹಂಚಿಕೊಂಡು, ಇತರರಿಗೆ ಇಂತಹ ಕಾಯಕ್ರಮಗಳಿಗೆ ಹೋಗಲು ಹುರಿದುಂಬಿಸಿದರು.

## ಬೆಂಗಳೂರು

ಕ್ರೆಸ್ಟ್, ಬೆಂಗಳೂರು, ದಿನಾಂಕ 18 ರಿಂದ 20 ಜನವರಿಯ ವರೆಗೆ 82 ಯುವ ಸಹಭಾಗಿಗಳಿಗೆ ಯಜಮಾನತ್ವವನ್ನು ವಹಿಸಿಕೊಂಡಿತ್ತು. ಬೆಂಗಳೂರಿನಲ್ಲಿಯ ಬಹಳಷ್ಟು ಯುವಕರು ಕ್ರೆಸ್ಟ್‌ಗೆ ಮೊದಲ ಬಾರಿಗೆ ಬಂದಿದ್ದರು. ಕ್ರೆಸ್ಟನ ವೇಳಾಪತ್ರಕವು ಸಹಭಾಗಿಗಳಿಗೆ ಬೆಳಗಿನ 4.15 ರಿಂದ ರಾತ್ರಿ 10ರ ವರೆಗೆ ವ್ಯಸ್ತವಾಗಿರಿಸಿತ್ತು.

'ನಮ್ಮನ್ನು ನಾವು ಬದಲಾಯಿಸಿಕೊಳ್ಳಲು, ನಾವೇ, ನಮ್ಮ ಮೂಲಕವೇ, ನಮ್ಮ ಮೇಲೆಯೇ ಕೆಲಸ ಮಾಡಬೇಕು' (ಸೋ. ಗೋಪಾಲನ್), 'ಅನಂತ ಸಾಮರ್ಥ್ಯದ ಬೀಜಗಳು' (ಸೋ. ಭದ್ರೇಶ್), ಮತ್ತು 'ಒಂದು ಸಿಂಹ ಐನೂರು ಕುರಿಗಳಿಗೆ ಮೇಲು' (ಸೋ. ಡಾ. ಕೃಷ್ಣಮೂರ್ತಿ), ಎಂಬ ವಿಷಯಗಳ ಮೇಲಿನ ಭಾಷಣಗಳು, ಸಹಭಾಗಿಗಳಿಗೆ ತುಂಬಾ ಪ್ರೋತ್ಸಾಹಕಪರವಾಗಿದ್ದು, ಯೋಚನಾಶೀಲರನ್ನಾಗಿಸಿದವು.

ಮಣ್ಣಿನ ಮಾದರಿಗಳು. ಭಾವಚಿತ್ರಣಗಳಂತಹ ಚಟುವಟಿಕೆಗಳು, ತಮ್ಮ ಸೃಜನಶೀಲತೆ ಹಾಗು ಪರಿಸರವನ್ನು ಹೊಸದೊಂದು ಬಗೆಯಿಂದ ನೋಡುವ ದೃಷ್ಟಿಯನ್ನು ವ್ಯಕ್ತಪಡಿಸುವಂತೆ ಮಾಡಿದವು. ಸಂಘಕಾರ್ಯ ಹಾಗು ಸೃಜನಶೀಲತೆಗಳು ದೃಷ್ಟಿಗೋಚರವಾಗಿದ್ದವು.

ಗ್ರಂಥಾಲಯದ ವೇಳೆಯಲ್ಲಿ ಪ್ರತಿಯೊಂದು ಗುಂಪಿಗೆ, ಗುರುಗಳು ವಿವಿಧ ಸಂದರ್ಭಗಳಲ್ಲಿ ನಮೂದಿಸಿದ ಪುಸ್ತಕಗಳನ್ನು ಕೊಡಲಾಯಿತು. ಆ ಗುಂಪಿನವರು ಅದನ್ನು ಓದಿ, ಚರ್ಚಿಸಿ ಮರುದಿನದ ಮಧ್ಯಾಹ್ನ ಅದನ್ನು ಪ್ರಸ್ತುತ ಪಡಿಸಲು ಹೇಳಲಾಯಿತು. ಎಲ್ಲಾ ಹತ್ತು ಗುಂಪುಗಳು, ತಮ್ಮ ಪುಸ್ತಕಗಳಲ್ಲಿನ ಸಾರವನ್ನು ವಿವಿಧ ಪದ್ಧತಿಯಲ್ಲಿ ಪ್ರಸ್ತುತ ಪಡಿಸಿದರು. ಅವರಲ್ಲಿಯ ಉತ್ಸಾಹ, ಸಂಘಕಾರ್ಯದ ಉತ್ಸುಕತೆ ನೋಡಲು ಅಂದವಾಗಿತ್ತು.

ಸಹಭಾಗಿಗಳು, ತಮಗೆ ಈ ಸುಸಂಧಿಯನ್ನು ಕೊಟ್ಟುದುದಕ್ಕಾಗಿ ಧನ್ಯವಾದಗಳನ್ನರ್ಪಿಸಿ, ಇದನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವ ಭರವಸೆಯನ್ನು ಹೊಂದಿದ್ದರು.

## ಅಡಲೇಜ ಯೋಗಾಶ್ರಮ, ಅಹಮದಾಬಾದ

ಜನವರಿ 6ರಂದು ನಲವತ್ತು ವರ್ಷ ವಯಸ್ಸಿನೊಳಗಿನ ವಿವಿಧ ಸಂಸ್ಥೆಗಳಲ್ಲಿಯ ಯುವಕರಿಗಾಗಿ 'ಧ್ಯಾನದ ಮೂಲಕ ಜೀವನದಲ್ಲಿ ಸಮತೋಲನೆ' ಎಂಬ ವಿಷಯದ





ಮೇಲೆ ಸಮ್ಮೇಳನವೊಂದನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ಸಹೋದರ ಜಿಗ್ನೇಶ ಶೆಲಾಟರವರು ವಹಿಸಿಕೊಂಡಿದ್ದು, ಸುಮಾರು ಎರಡು ಗಂಟೆಗಳಕಾಲ ನಡೆದ ಈ ಸತ್ರದಲ್ಲಿ ಗುಂಪು ಚರ್ಚೆ ಹಾಗು ಸಹಜಮಾರ್ಗದ ಪರಿಚಯಗಳನ್ನು ಅಳವಡಿಸಲಾಗಿತ್ತು. ಇದರ ಪರಿಣಾಮವು ಅತ್ಯುತ್ತಮವಾಗಿದ್ದು, ಇಲ್ಲಿನ ವ್ಯವಸ್ಥಾಪಕರಿಗೆ, ಪ್ರತಿ ಮೂರು ತಿಂಗಳಿಗೊಮ್ಮೆ ಇಂತಹ ಬಹಿರಂಗ ಸಭೆಗಳನ್ನು ಆಯೋಜಿಸಲು ಉದ್ಯುಕ್ತಗೊಳಿಸಿತು.

## ಯುವಕರ ಕಾರ್ಯಕ್ರಮ, ಅಹಮದನಗರ.

ಅಹಮದನಗರದ ಕೇಂದ್ರದಲ್ಲಿ, ಡಿಸೆಂಬರ್ 30, 2012 ರಂದು 'ಸತತ ಸ್ಮರಣೆ' ಈ




ವಿಷಯದ ಮೇಲೆ, ಕಾರ್ಯಕ್ರಮವೊಂದನ್ನು ಆಯೋಜಿಸಲಾಯಿತು. ಭಜನೆ ಹಾಗು ಪದ್ಯಗಳ ಗುರುಗಳ ಮೇಲಿನ ಪ್ರೇಮವನ್ನು ವ್ಯಕ್ತಪಡಿಸಿದವು. ಸಹೋದರ ತಪಸ್ ಕುಲಕರ್ಣಿಯವರು 2012 ರಲ್ಲಿಯ ಚಟುವಟಿಕೆಗಳ ವಿವರವನ್ನಿತ್ತರು. ತದನಂತರ 'ಋತವಾಣಿ' ಈ ಪುಸ್ತಕದ ಆಧಾರದ ಮೇಲೆ ಪೂಜ್ಯ ಬಾಬೂಜೀ ಮಹಾರಾಜರ ಬೋಧನೆಗಳನ್ನು ತಿಳಿದುಕೊಳ್ಳಲು ಹಾಗು ಮಿಷನ್ನಿನ ಸಾಹಿತ್ಯವನ್ನೋದಲು ಪ್ರೋತ್ಸಾಹಿಸಲು ಸ್ಪರ್ಧೆಯ ಕಾರ್ಯಕ್ರಮವಾಯಿತು. ಸಹೋದರರು, ಸಹೋದರಿಯರು ಹಾಗು ಮಕ್ಕಳು ಈ ರೀತಿ ಮೂರು ಭಾಗಗಳಾಗಿ ವಿಂಗಡಿಸಿ, ಚರ್ಚಾಕೂಟವನ್ನು ನೆರವೇರಿಸಲಾಯಿತು. ಇದರಿಂದ ಪರಸ್ಪರ ಪರಿಚಯ, ಹಾಗು ಬಂಧುಭಾವವನ್ನು ಬೆಳೆಸಿಕೊಳ್ಳಲು ಸಹಾಯವಾಯಿತು. ಈ ಕಾರ್ಯಕ್ರಮ ಸತತಸ್ಮರಣೆಯ ಮೇಲಿನ ಕಿರುನಾಟಿಕೆ ಮತ್ತು ಮುಂಬರುವ ಹೊಸವರ್ಷದ ಸಮಾರಂಭವನ್ನಾಚರಿಸಲು ಕೇಕ್ ಕತ್ತರಿಸುವುದರೊಂದಿಗೆ ಮುಕ್ತಾಯವಾಯಿತು.

## ವಡೋದರಾ

ವಡೋದರಾದ ಯುವಕರು ಆಶ್ರಮದ ಆವರಣದಲ್ಲಿ, ಸಸಿಗಳನ್ನು ನೆಟ್ಟು, ಗಣರಾಜ್ಯದಿನೋತ್ಸವವನ್ನು ಆಚರಿಸಿದರು. ನಾವು ನಿಸರ್ಗವನ್ನು ಆದರಿಸಿ, ಪ್ರೀತಿಯಿಂದ ಪೋಷಿಸಲು ಕಲಿತರೆ, ಅದು ನಮ್ಮ ಒಳ್ಳೆಯ ಮಿತ್ರನಾಗಬಲ್ಲದು.



## ಪ್ರಶಿಕ್ಷಕ ಸಮ್ಮೇಳನ, ಶಹಜಹಾನಪುರ.

ಶಹಜಹಾನಪುರದ ಆಶ್ರಮದಲ್ಲಿ, ಡಿಸೆಂಬರ್ ಕೊನೆಯ ವಾರದಲ್ಲಿ ಆಯೋಜಿಸಲಾದ ಸಮ್ಮೇಳನದಲ್ಲಿ, 38 ಪ್ರಶಿಕ್ಷಕರು ಹಾಜರಿದ್ದರು. ಇದು 'ಸಾಧನೆಯಲ್ಲಿ ನೆಲೆಸುವಿಕೆ' ಯ ಕಾರ್ಯಕ್ರಮದಿಂದ ಆರಂಭವಾಯಿತು. ಮರುದಿನ ಸಹಭಾಗಿಗಳನ್ನು ಐದು ಗುಂಪುಗಳಾಗಿ ವಿಂಗಡಿಸಿ, ವಿವಿಧ ವಿಷಯಗಳನ್ನು ಚರ್ಚೆಗಾಗಿ ಕೊಡಲಾಯಿತು. ಉದಾಹರಣೆಗೆ,

- ಮಾದರಿಯ ರೂಪದಲ್ಲಿ ಸೇವೆ ಸಲ್ಲಿಸುವದು ಹೇಗೆ.
- ಕೇಂದ್ರದಲ್ಲಿಯ ವಿವಿಧ ಕ್ಷೇತ್ರಗಳಲ್ಲಿಯ ವಿಷಯಗಳ ಬಗ್ಗೆ ಆಳವಾದ ತಿಳುವಳಿಕೆ ಬೆಳೆಸಿಕೊಳ್ಳುವದು ಹೇಗೆ
- ಅಭ್ಯಾಸಿಗಳಿಗೆ ಗುರುಗಳೊಂದಿಗಿನ ಸಂಬಧವನ್ನು ಬೆಳೆಸಿಕೊಳ್ಳಲು ಉತ್ತೇಜನ ಹಾಗು ಪ್ರೇರಣೆ ಕೊಡುವದು ಹೇಗೆ.
- ಕಾರ್ಯಕ್ಷಮ ಹಾಗು ಪ್ರೇರಿತ ಸ್ವಯಂಸೇವಕರನ್ನು ಒಂದುಗೂಡಿಸಿ, ಅವರಲ್ಲಿ ಐಕ್ಯತೆ ಹಾಗು ಭ್ರಾತೃತ್ವ ಭಾವನೆಗಳನ್ನು ಚೇತರಿಸುವದು ಹೇಗೆ.
- ಕೇಂದ್ರದಲ್ಲಿ ಆಧ್ಯಾತ್ಮಿಕ ಏಳಿಗೆಗಾಗಿ ಪ್ರಮಾಣಬದ್ಧವಾದ ಯೋಜನೆಗಳನ್ನು ರೂಪಿಸುವದು.

ಚರ್ಚೆ ಮತ್ತು ಅನುಭವ ಹಾಗು ವಿಚಾರಗಳನ್ನು ಹಂಚಿಕೊಂಡ ನಂತರ, ತಮ್ಮ ತಮ್ಮ ಕೇಂದ್ರಗಳಲ್ಲಿಯ ನ್ಯೂನತೆಗಳನ್ನು ಎಲ್ಲಾ ಸಹಭಾಗಿಗಳ ಒಪ್ಪಿಕೊಂಡರು, ಹಾಗು ಒಳ್ಳೆಯ ಬದಲಾವಣೆಗಳನ್ನು ತಂದುಕೊಳ್ಳಲು ನಿರ್ಧರಿಸಿದರು. ಆಂತರಿಕ ಆನಂದದಿಂದ ಹೊಳೆಯುವ ಸಹಭಾಗಿಗಳ ಮುಖಗಳು, ಈ ಸಮ್ಮೇಳನವು ಕಣ್ಣು ತೆರೆಯುವಂತಹದೂ, ಒಳ್ಳೆಯ ನಿರ್ವಹಣೆ ಹಾಗು ಸ್ವೀಕೃತವೂ ಆಗಿತ್ತೆಂಬುದಕ್ಕೆ ಒಳ್ಳೆಯ ಪುರಾವೆಯಾಗಿದ್ದವು.

## ಹೊಸ ನೇಮಕಾತಿಗಳು

### ಕೇಂದ್ರ ಸಂಚಾಲಕರು

ಪಟಿಯಾಲಾ, ಪಂಜಾಬ – ಸೋ. ಅನಿಲ್ ವಶಿಷ್ಠ
ನವಸಾರಿ, ಗುಜರಾತ್– ಸೋ. ಸತೀಶ್ ಬಲವಂತರಾಯ್ ಮೆಹತಾ
ವಾಪಿ, ಗುಜರಾತ್– ಸೋ. ಪ್ರಕಾಶ್ ದಯಾರಾಮ್ ಪಟೇಲ್
ತ್ರಿಪ್ರಯಾರ್, ಕೇರಳ – ಸೋ. ಎಸ್. ಜಯಕುಮಾರ್
ವಾರಣಾಸಿ, ಉ.ಪ್ರ. – ಸೋ. ಮಾಯಾ ಸಿಂಗ
ವಿಶಾಖಾಪಟ್ಟಣ, ಆಂ.ಪ್ರ. – ಸೋ. ಕೊಲಾಚಿನ ಸಪ್ತಮುಖಲು
ಲಖನೌ, ಉ. ಪ್ರ. – ಸೋ. ಪ್ರಿಯದರ್ಶಿನಿ ಸಕ್ಸೇನಾ

### ವಲಯ ಸಂಚಾಲಕರು

ಒಡಿಸಾ – ಸೋ. ಗಂಧರ್ವ ಬೆಹೆರಾ
ಮಹಾರಾಷ್ಟ್ರ– ಪಶ್ಚಿಮ ಮತ್ತು ಗೋವಾ – ಸೋ. ಡಾ. ಸುಭಾಶ್ ವೈದ್ಯ
ಮಹಾರಾಷ್ಟ್ರ – ಕೇಂದ್ರ – ಸೋ. ಅರುಣ್ ಕುಮಾರ್ ಚೌಹಾನ್
ಮಹಾರಾಷ್ಟ್ರ – ವಿದರ್ಭ – ಸೋ. ರಾಜೇಂದ್ರನ್ ರತಿನಾಮ್
ಮಧ್ಯಪ್ರದೇಶ (ಪಶ್ಚಿಮ) – ಸೋ. ಪ್ರಭಾಕರ್ ದಾಸ್
ಮಧ್ಯಪ್ರದೇಶ (ಪೂರ್ವ)– ಸೋ. ಮೇ.ಜನರಲ್ ಎ.ಎನ್. ಮುದ್ರೆ

ಲಖನೌ, ಆಶ್ರಮ ನಿರ್ವಾಹಕರು – ಸೋ. ಓಂಪ್ರಕಾಶ್ ಗುಲಿಯಾ
ಮಲಂಪುಳ ಪುನಶ್ಚೇತನ ಕೇಂದ್ರ ನಿರ್ವಾಹಕರು – ಸೋ. ಕೆ. ಚಂದ್ರಶೇಖರನ್ ನಾಯರ್

# ಅಲ್ವಾರ ಆಶ್ರಮ, ರಾಜಸ್ಥಾನ

## ಪ್ರಭಾ ಕೇಂದ್ರ









"ಗುರುಗಳನ್ನು ಆದರ್ಶವಾಗಿಟ್ಟುಕೊಂಡು ನಮ್ಮ ವರ್ತನೆಗಳನ್ನು ಸುಧಾರಿಸಿಕೊಳ್ಳಲು ಹೆಣಗಬೇಕು. ಆತನು ವಿನಯಶೀಲನಾಗಿದ್ದರೆ ನೀವೂ ವಿನಯಶೀಲರಾಗಿರಲು ಪ್ರಯತ್ನಿಸಬೇಕು ಅಭ್ಯಾಸ ಬಲದಿಂದ ಅದು ವಿನಮ್ರತೆಯಾಗುತ್ತದೆ. ನೀವು ಯಾರನ್ನು ಮೆಚ್ಚಿಕೊಂಡು, ಪ್ರೀತಿಸುವೆವೆಂದು ಭಾವಿಸುವಿರೋ, ಕೇವಲ ಅವರ ಅನುಕರಣೆಯಿಂದ ನಿಮ್ಮ ಸ್ವಭಾವವನ್ನು ಬದಲಾಯಿಸಿಕೊಳ್ಳಬಹುದು."

( ಸರಿಸ್ಕಾದಲ್ಲಿ ಪ್ರಶಿಕ್ಷಕರ ಸಮ್ಮೇಳನದಲ್ಲಿ, 4ನೇ ಮೇ 1990ರಂದು ಪಿ.ರಾಜಗೋಪಾಲಾಚಾರಿಯವರು ಮಾಡಿದ ಭಾಷಣ)

ಅಲ್ವಾರ, (ರಾಜಸ್ಥಾನದ ಸಿಂಹದ್ವಾರ) ವು, ಅರಾವಳಿ ಪರ್ವತದ ಸುಂದರ ಪ್ರದೇಶದಲ್ಲಿದೆ. ಇದು ದೆಹಲಿಯಿಂದ 160 ಕಿ.ಮೀ. ದಕ್ಷಿಣಕ್ಕು ಹಾಗು 150 ಕಿ.ಮೀ. ಜಯಪುರದ ಉತ್ತರಕ್ಕೂ ಸ್ಥಿತವಾಗಿದೆ. ಅಲ್ವಾರವು ತನ್ನ ಪ್ರಬುದ್ಧ ಆಧ್ಯಾತ್ಮಿಕ ಪರಂಪರೆಗಾಗಿ ಪ್ರಸಿದ್ಧವಾಗಿದೆ. ಅಲ್ವಾರ ಕೇಂದ್ರವು 1989ರಲ್ಲಿ, ಸಹೋದರ ಗೋಕುಲ ಗೋಸ್ವಾಮಿಯವರು ಇಲ್ಲಿಗೆ ವರ್ಗವಾಗಿ ಬಂದಾಗ ಅಸ್ತಿತ್ವಕ್ಕೆ ಬಂದಿತು. ನಂತರ ಸಹೋದರ ಜೆ.ಪಿ.ದುಬೆ ಹಾಗು ಅವರ ಪತ್ನಿ ಅಭ್ಯಾಸಿಗಳಾದರು. ಸತ್ಸಂಗವು ಸೋ. ದುಬೆಯವರ ಮನೆಯಲ್ಲಿಯೇ ಕೆಲ ವರ್ಷಗಳಕಾಲ ನಡೆಯುತ್ತಿತ್ತು. 1996 ರಲ್ಲಿ, ಸೋ. ದುಬೆಯವರನ್ನು ಪ್ರಶಿಕ್ಷಕರನ್ನಾಗಿ ಮಾಡಲಾಯಿತು. ಅಭ್ಯಾಸಿಗಳ ಸಂಖ್ಯೆ ಬೆಳೆಯುತ್ತಿದ್ದಂತೆ, ರವಿವಾರದ ಸತ್ಸಂಗವನ್ನು ಒಂದು ಶಾಲೆಗೆ ಸ್ಥಳಾಂತರಿಸಲಾಯಿತು.

ಆಶ್ರಮವು ರಾಜಸ್ಥಾನ ರಾಜ್ಯಹೆದ್ದಾರಿಯ ಮೇಲಿನ, ಅಂಬೇಡಕರ ನಗರವೆಂಬ ಪೂರ್ಣವಾಗಿ ಬೆಳವಣಿಗೆ ಹೊಂದಿದ ವಸಾಹತಿನಲ್ಲಿ, ಸ್ಥಿತವಾಗಿದೆ. ಇದು ನಗರದ ಪೂರ್ವಭಾಗದಲ್ಲಿ ರೇಲ್ವೆನಿಲ್ದಾಣದಿಂದ 0.4 ಕಿ.ಮೀ. ಹಾಗು ಬಸ್ ನಿಲ್ದಾಣದಿಂದ 0.6 ಕಿ.ಮೀ. ದೂರದಲ್ಲಿದೆ. ಗುರುಗಳು ಮೊದಲನೆಯ ಬಾರಿಗೆ, ಅಲ್ವಾರಕ್ಕೆ, ಸಾರಿಸ್ಕಾ ಪ್ಯಾಲೆಸ್ ಹೋಟೆಲಿನಲ್ಲಿ 3–5 ಮೇ 1990ರಲ್ಲಿ ಜರುಗಿದ ಮೊಟ್ಟಮೊದಲನೆಯ ಅಂತರರಾಷ್ಟ್ರೀಯ ಪ್ರಶಿಕ್ಷಕರ ಸಮ್ಮೇಳನದಲ್ಲಿ ಭಾಗವಹಿಸಲು ಬಂದಾಗ, ಭೇಟಿ ನೀಡಿದ್ದರು. ಎರಡನೆಯ ಸಲದ ಪ್ರಸಂಗ, 19–20ನೇ ಅಕ್ಟೋಬರ್ 1999ರಲ್ಲಿ ರಾಜ್ಯಮಟ್ಟದ ಸಮಾರಂಭದುದಾಗಿತ್ತು. ಅವರ ಭೇಟಿಗಳು ಕೇಂದ್ರದ ಬೆಳವಣಿಗೆಯನ್ನುಂಟುಮಾಡಿ, ಈಗ ಸುಮಾರು ಮುನ್ನೂರು ಸಂಖ್ಯೆಯಲ್ಲಿ ನಿಯಮಿತವಾಗಿ ಹಾಜರಿರುವ ಅಭ್ಯಾಸಿಗಳು ಅಲ್ವಾರದಲ್ಲಿದ್ದಾರೆ.

ರಾಜ್ಯಶಾಸನವು U.I.T.(ಅಲ್ವಾರ್), ಮೂಲಕ 2051 ಚ.ಮೀ. ಗಾತ್ರದ ಜಮೀನನ್ನು 99 ವರ್ಷ ಗೇಣಿಯ ಆಧಾರದ ಮೇಲೆ ನಿಗದಿಪಡಿಸಿತು. ಗೇಣಿ ಕರಾರನ್ನು 1ನೇ ನವೆಂಬರ್ 2007ರಂದು ಮಿಷನ್ನಿನ ಕಾರ್ಯದರ್ಶಿಗಳಾದ ಸೋ. ಉಮಾಶಂಕರರವರಿಂದ ನೋಂದಾಯಿಸಲ್ಪಟ್ಟಿತು.

ಜನವರಿ 28, 2010ರಂದು ಗುರುಗಳು ಉದ್ಘಾಟನೆಯ ಶಿಲೆಯನ್ನು ಅನಾವರಣಗೊಳಿಸಿದರು, ಹಾಗು ಈ ಸಮಾರಂಭಕ್ಕೆ ಆಗಮಿಸಿದ ಸುಮಾರು ಐನೂರು ಅಭ್ಯಾಸಿಗಳಿಗಾಗಿ ಸತ್ಸಂಗವನ್ನು ನೆರವೇರಿಸಿದರು. ಅಂದಿನಿದ, ಅಲ್ವಾರ ಕೇಂದ್ರದವರಷ್ಟೇ ಅಲ್ಲದೆ ಸಮೀಪದ ಕೇಂದ್ರಗಳಾದ ರಾಜಘರ್, ಖೈರಥಾಲ್, ಕೊಟಪುತಲಿ, ಬಂಡಿಕುಯಿ, ಮಹ್ವಾ ಮತ್ತು ಪಿಲ್ವಾಗಳಲ್ಲಿಯ ಅಭ್ಯಾಸಿಗಳೂ ಸಹ ಪ್ರೇಮ ಹಾಗು ಭಕ್ತಿಯಿಂದ, ಅನೇಕ ಸಮಾರಂಭಗಳಲ್ಲಿ ಪಾಲ್ಗೊಂಡಿದ್ದಾರೆ.

ಇಲ್ಲಿಂಯುವರೆಗೆ, ಸುತ್ತುಗೋಡೆ, 26'X76' ಆಕಾರದ ಧ್ಯಾನಮಂದಿರವೆಂದು ಉಪಯೋಗಿಸಲಾಗುತ್ತಿರುವ ಹಾಲ್, ಪಕ್ಕದಲ್ಲಿಯೇ ಗುರುಗಳ ಕಾರ್ಯಾಲಯ, ಅಡುಗೆಮನೆ, ಕಾವಲುಗಾರನ ಕೋಣೆ, ಸ್ವಚ್ಛತಾಗೃಹಗಳು, ಒಂದು ಬೋರ್ ವೆಲ್, ಹಾಗು ಎರಡು ಎಚ್.ಪಿ ಸಬಮರ್ಸಿಬಲ್ ಪಂಪನ್ನು ಕೂಡಿಸುವ ಈ ಎಲ್ಲಾ ಕೆಲಸಗಳನ್ನು ಪೂರ್ಣಗೊಳಿಸಲಾಗಿದೆ.ಆಶ್ರಮದ ಆವರಣದಲ್ಲಿ, ಒಳಗೆ ಹಾಗು ಹೊರಗಡೆ ಹೂಗಿಡಗಳು, ಹಾಗು ಮರಗಳು ಹೊಂದಿದ ಸುಂದರವಾದ ಕೈದೋಟವು ರಮಣೀಯವಾಗಿದೆ. ಭವಿಷ್ಯದಲ್ಲಿ 50'X 76' ಚ.ಅಡಿ. ಆಕಾರದ ಧ್ಯಾನಮಂದಿರವನ್ನು ಕಟ್ಟುವ ಯೋಜನೆ ಹಾಕಿಕೊಳ್ಳಲಾಗಿದೆ.

**To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org**

© 2013 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.